ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಗುರುವಾರ, ೨೯ನೇ ನವೆಂಬರ್ ೧೯೮೪ ಮಾರ್ಗಶಿರ ೮ ೧೯೦೬ ಶಕ

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧ ಗಂಟೆಗೆ ಸಮಾವೇಶಗೊಂಡಿತು

[ಅಧ್ಯಕ್ಷರು (ಶ್ರೀ ಡಿ. ಬಿ. ಚಂದ್ರೇಗೌಡ) ಪೀಠವನ್ನು ಅಲಂಕರಿಸಿದರು.]

ಸಂತಾಪ ಸೂಚನಾನಿರ್ಣಯಗಳು

ವಿಷಯ.–ಶ್ರೀಮತಿ ಇಂದಿರಾಗಾಂಧಿಯವರ ಅಮಾನುಷ ಹತ್ಯೆ ಮಂತ್ರಿತರ ಗಣ್ಯ ವ್ಯಕ್ತಿಗಳ ಮರಣದ ಬಗ್ಗೆ.

ಶ್ರೀ ರಾಮಕೃಷ್ಣ ಹೆಗ್ಗಡೆ.—(ಮುಖ್ಯಮಂತ್ರಿಯವರು)ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿಯನ್ನು ಕೋರಿ ಸಂತಾಪ ಸೂಚಕ ಗೊತ್ತುವಳಿಯನ್ನು ಈ ಸಭೆಯ ಮುಂದೆ ಮಂಡಿಸಲಿಕ್ಕೆ ನಾನು ಬಯಸುತ್ತೇನೆ

ದಿನಾಂಕ ೩೧–೧೦–೧೯೮೪ರ ರಂದು ಭಾರತದ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರ ಕ್ರೂರ ಹಾಗೂ ಅಮಾನುಷ ಹತ್ಯೆಯನ್ನು ಈ ಸಭೆಯು ಖಂಡಿಸುತ್ತದೆ.

ಅವರ ಮರಣದಿಂದ ಭಾರತವು ವಿಶ್ವದಾದ್ಯಂತ ವಂದ್ಯಣೆ ಹಾಗೂ ಗೌರವವನ್ನು ಪಡೆದಂತಹ ಅತ್ಯಂತ ದಕ್ಷ ಹಾಗೂ ಶ್ರೇಷ್ಠ ನಾಯಕಿಯನ್ನು ಕಳೆದುಕೊಂಡಿದೆ. ಅವರು ರಾಷ್ಟ್ರಕ್ಕೆ ತೃತೀಯ ಜಗತ್ತಿಗೆ ಹಾಗೂ ವಿಶ್ವಶಾಂತಿಗೆ ಸಲಿಸಿದ ವಿಶಿಷ್ಟ ಸೇವೆಯನ್ನು ಸ್ಮರಿಸುತ್ತಾ ಈ ಸದನವು ಅವರ ಅಕಾಲಿಕ ಮರಣಕ್ಕೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ. ದುಃಖಿತಪ್ತರಾದ ಅವರ ಕಂಬುಂಬದ ಸದಸ್ಯರಿಗೆ ಈ ಸದನವು ಸಂತಾಪವನ್ನು ವ್ಯಕ್ತಪಡಿಸುತ್ತದೆ.

ನಾನು ಈ ನಿರ್ಣಯವನ್ನು ಇಂಗ್ಲೀಷಿನಲ್ಲಿ ಓದುವುದಕ್ಕೆ ಬಯಸುತ್ತೇನೆ. ಏತಕ್ಕೆಂದರೆ ಇದರ ಕನ್ನಡ ಭಾಷಾಂತರ ಅಷ್ಟು ತೃಪ್ತಿಕರವಾಗಿಲ್ಲ. ಎನ್ನುವುದು ನನ್ನ ಭಾವನೆ.

> "This House condemns the cruel and dastardly assassination of Smt. Indira Gandhi, the Prime Minister of India on 31st October 1984.
>
> In Her death, India has lost a great leader of out steanding ability and courage who enjoyed well deserved prestige and respected all over the world. This House morns Her death and places on record her illustrious service to the nation, to the cause of the Third world and world peace. This House sends its condolences to the bereaved family.'

ಮಾನ್ಯ ಅಧ್ಯಕ್ಷರೆ, ಆಕ್ಟೋಬರ್ ೧೭ನೇ ತಾರೀಖು ನಾನು ವಿದೇಶ ಪ್ರವಾಸಕ್ಕಾಗಿ ಬೆಂಗಳೂರಿನಿಂದ ಹೊರಟೆ. ಆ ಸಂದರ್ಭದಲ್ಲಿ ನಮ್ಮ ದೇಶದ ಪ್ರಧಾನ ಮಂತ್ರಿಗಳು ಇಲ್ಲಿಗೆ ಬರುವವರಿದ್ದರು ನಾನು ಊರಲ್ಲಿ ಇರಲಿಲ್ಲ. ನಾನು ಅವರಿಗೆ ಒಂದು ಸಣ್ಣ ಸಂದೇಶವನ್ನು ಬರೆದು ಕಳುಹಿಸಿದ್ದೆ.

ಏನೆಂದರೆ, ಈ ಸಲ ನೀವು ಬೆಂಗಳೂರಿಗೆ ಬಂದಾಗ ನಾನು ಇಲ್ಲಿ ಇರುವುದು ಸಾಧ್ಯವಿಲ್ಲ., ಮುಂದಿನ ಸಲ ಭೇಟಿಯಾಗುತ್ತೇನೆ ಎಂದು. ಇದು ಎಂತಹ ಕಲ್ಪನಾತೀತವಾದಂತಹ ವಿಚಾರ ನಾನು ವಿದೇಶದಿಂದ ವಾಪಸ್ ಮರಳುವುದರೊಳಗೆ ಶ್ರೀಮತಿ ಇಂದಿರಾಗಾಂಧಿಯವರು ನಮ್ಮನ್ನು ಅಗಲಿ ಹೋಗಿರ ತಕ್ಕಂಥದ್ದು ನಂಬಲಾಗದ ಶೋಚನೀಯ ಸಂಗತಿ ಮರಣ ಎಲ್ಲರಿಗೂ ಬರುತ್ತದೆ. ಯಾರ ಜೀವನವು ಶಾಶ್ವತವಲ್ಲ. ಆದರೆ ಭಾರತದಂತಹ ಒಂದು ದೊಡ್ಡ ರಾಷ್ಟ್ರದ ಅತ್ಯಂತ ಉತ್ತುಂಗ ಸ್ಥಾನದಲ್ಲಿದ್ದಂತಹ ವ್ಯಕ್ತಿಯೊ ಮರಣ ಯಾವ ರೀತಿ ಆಯಿತು ಎಂದು ಹೇಳುವುದು ಕೂಡ ಕಲ್ಪನಾತೀತವಾದಂತಹ ವಿಚಾರ ಇದು ಕೇವಲ ಕ್ರೂರ ವಂತ್ತು ಅಮಾನುಷ ಅಷ್ಟೇ ಅಲ್ಲ. ಖಂಡನೀಯ ಅಷ್ಟೇ ಅಲ್ಲ, ಇದೂ ಒಂದು ಅನಾಗರೀಕವಾದಂತದ್ದು ಹಾಗೂ ನಮ್ಮ ದೇಶದ ಸಂಸ್ಕೃತಿಗೆ ಕಳಂಕ ತರತಕ್ಕಂಥದ್ದು. ಶ್ರೀಮತಿ ಇಂದಿರಾಗಾಂಧಿಯವರು ೧೯೬೬ನೇ ಇಸವಿಯಲ್ಲಿ ಪ್ರಥಮ ಭಾರಿಗೆ ಪ್ರಧಾನ ಮಂತ್ರಿಗಳಾದಾಗ ನಾನು ಕಾಂಗ್ರೆಸ್‌ನಲ್ಲಿದ್ದೆ. ಆ ಸಂದರ್ಭದಲ್ಲಿ ನಡೆದ ಮಾತು ಕತೆ ಆ ಸಂದರ್ಭದಲ್ಲಿ ನಡೆದಂತಹ ಚಟುವಟಿಕೆ ನನ್ನ ಕಣ್ಮುಂದೆ ಬರುತ್ತಾ ಇದೆ. ಆಗ ಮಾನ್ಯ ಮುಂರಾರ್ಜಿದೇಸಾಯಿಯವರನ್ನು ಮಾಡಬೇಕೋ ಅಥವಾ ಶ್ರೀಮತಿ ಇಂದಿರಾ ಗಾಂಧಿಯವರನ್ನ ಕಾಂಗ್ರೇಸ್ ಪರವಾಗಿ ಉಮೇದುವಾರರನ್ನಾಗಿ ಮಾಡಬೇಕೋ ಎಂದು ಹೇಳುವುದರ ಬಗ್ಗೆ ತೀವ್ರವಾದ ಚರ್ಚೆ ನಡೆಯಿತು. ಕಾಂಗ್ರೇಸ್ ವರಿಷ್ಠರಲ್ಲಿ ಒಂದು ತರಹ ಅಭಿಪ್ರಾಯವಿದ್ದರೆ ಯುವಕರಲ್ಲಿ ಮುತ್ತೊಂದು ತರಹ ಅಭಿಪ್ರಾಯವಿತ್ತು. ಆದರೆ ಬಹುತೇಕ ಅಭಿಪ್ರಾಯ ಇಂದಿರಾ ಗಾಂಧಿಯವರ ಪರವಾಗಿಯೇ ಇತ್ತು. ವರಿಷ್ಠರು ಹೇಗಿದ್ದರೂ ಈ ಒಬ್ಬ ಮಹಿಳೆಗೆ ಶಾಕಷ್ಟು ಅನುಭವ ಆಡಳಿತದಲ್ಲಿ ಇಲ್ಲದಿದ್ದರೂ ಸಹ ಇವರು ಒಳ್ಳೆ ಹೆಸ್ಸರಿಯಲ್ಲಿ ಬಂದಂತಹವರು ಆಗಿರುವುದರಿಂದ ಇವರನ್ನು ಪ್ರಧಾನ ಮಂತ್ರಿಗಳನ್ನಾಗಿಮಾಡಿದರೆ ತಮ್ಮ ಹೇಳಿಕೆಯ ಪ್ರಕಾರನಡೆಯುತ್ತಾರೆ ಎನ್ನುವಅಭಿಪ್ರಾಯ ಇತ್ತು ಆದರೆ ಯುವಕರಲ್ಲಿ ಅಂದರೆ ನನ್ನಂತಹ ಕಾರ್ಯಕರ್ತರನ್ನು ಸೇರಿಸಿಕೊಂಡು ಇದ್ದಂತಹ ಒಂದು ಅಭಿಪ್ರಾಯ ಏನೆಂದರೆ ಒಂದು ಮನ್ವಂತರ ಕಳೆಯಿತು ಮತ್ತೊಂದು ಮನ್ವಂತರ ನಮ್ಮ ರಾಜಕೀಯ ಇತಿಹಾಸದಲ್ಲಿ ಆಗಬೇಕು ಅದರ ಹೊಸಲಿನಲ್ಲಿ ನಾವಿದ್ದೇವೆ. ಈ ಒಂದು ಹೆಸ್ಸರಿಯಲ್ಲಿ ಆಗ ನಾವು ಇದ್ದೆವು. ಅಂತಹ ಸಂದರ್ಭದಲ್ಲಿ ಯುವ ಜನಾಂಗದ ಪ್ರತೀಕವಾದಂತಹ ಮತ್ತು ಇಡೀ ರಾಷ್ಟ್ರಕ್ಕೆ ಸೇರಿದಂತಹ ಅಪ್ರತಿಮ ಕೌಟುಂಬಿಕ ಹೆಸ್ಸರಿಲಿ ಇದ್ದಂತಹ ಶ್ರೀಮತಿ ಇಂದಿರಾ ಗಾಂಧಿಯವರು ಪ್ರಧಾನ ಮಂತ್ರಿಯ ಸ್ಥಾನವನ್ನು ಜವಾಬ್ದಾರಿಯಾಗಿ ನಿರ್ವಹಿಸಲು ಯೋಗ್ಯರು ಮತ್ತು ಸಮರ್ಥರು ಎನ್ನುವ ಭಾವನೆ ಆಗ ನಮ್ಮಲ್ಲಿತ್ತು.

ಹೀಗಾಗಿ ಅವರ ಪರವಾಗಿ ಎರಡು ಪಂಗಡದ ಅಭಿಪ್ರಾಯ ಇದ್ದರೂ ಸಹ ಅದು ಎರಡು ತರಹದ ಅಭಿಪ್ರಾಯವಾಗಿತ್ತು. ೧೯೬೬ನೇ ಇಸವಿಯಲ್ಲಿ ಅವರು ಪ್ರಧಾನ ಮಂತ್ರಿಗಳಾದರು. ಅಂದಿನಿಂದ ಅವರು ಕೊನೆಯ ಉಸಿರು ಎಳೆಯುವವರೆಗೂ ದೇಶಕ್ಕಾಗಿ ಅವಿರತವಾಗಿದುಡಿದು ನಮ್ಮ ರಾಷ್ಟ್ರದ ಮೇಲೆ ಅವರ ಪ್ರಭಾವೀ ವ್ಯಕ್ತಿತ್ವದ ಅಳಿಸಲಾರದ ಮುದ್ರೆ ಪ್ರತಿಬಿಂಬಿತವಾಗಿತ್ತು ಎಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ರಾಜಕೀಯದಲ್ಲೂ ಬಹಳ ಸ್ವಲ್ಪ ಜನರಿಗೆ,--ಅಂದರೆ ಕೆಲವೇ ಜನರಿಗೆ ಇಂತಹ ಒಂದು ವ್ಯಕ್ತಿತ್ವ ಸಿಗುತ್ತದೆ. ಶ್ರೀಮತಿ ಇಂದಿರಾಗಾಂಧಿಯವರನ್ನು ಕುರಿತು ನಮ್ಮ ಪಕ್ಷದವರು ಮತ್ತು ನಾನು ಟೀಕೆಗಳನ್ನು ಮಾಡಿದ್ದೇವೆ, ಕಠಿಣವಾದಂಥ ಶಬ್ದಗಳನ್ನು ಬಳಸಿದ್ದೇವೆ, ಕ್ರೂರವಾಗಿ ಅವರನ್ನು ನಿಂದಿಸಿದ್ದೇವೆ. ಆದರೆ ಆ ಎಲ್ಲಾ ಟೀಕೆಗಳು ಅವರ ವ್ಯಕ್ತಿತ್ವಕ್ಕೆ ಸಂಬಂಧಪಟ್ಟಂಥ ಅಥವಾ ಅವರ ಸ್ವಂತಕ್ಕೆ ಸಂಬಂಧಪಟ್ಟಂಥ ಟೀಕೆಗಳಲ್ಲ. ನಮ್ಮ ಕೆಲವು ಟೀಕೆಗಳು ಅವರು ಅನುಸರಿಸಿದಂಥ ದಾರಿಯ ಬಗ್ಗೆ ಆಗಿದ್ದರೆ ಕೆಲವು ಅವರು ಅನುಸರಿಸಿದಂಥ ನೀತಿ ಬಗ್ಗೆ ಆಗಿರಬಹುದು. ಆದರೆ ಅವರ ವಿರುದ್ಧ ಅತ್ಯಂತ ಕಠಿಣವಾಗಿ ಟೀಕೆ ಮಾಡಿದವರೂ ಕೂಡ ಅವರಲ್ಲಿ ಅನೇಕ ಅದ್ವಿತೀಯವಾದಂಥ ಗುಣಗಳನ್ನು ಕಂಡಿದ್ದಾರೆ. ಒಂದು ಮಾತನ್ನು ನಾನು ಈಗಾಗಲೇ ಹೇಳಿದ್ದೇನೆ. ಅವರು ಯಾವುದೇ ಒಂದು ರಾಜ್ಯಕ್ಕೆ ಸೇರಿದವರಲ್ಲ, ಯಾವುದೇ ಒಂದು ಕೋಮಿಗೆ ಸೇರಿದವರಲ್ಲ, ಅಥವಾ ಯಾವುದೇ ಒಂದು ಭಾಷಿಕ ವರ್ಗಕ್ಕೆ ಸೇರಿದವರಲ್ಲ. ನಾವು ಇಡೀ ದೇಶದ ತುಂಬಾ ಕಣ್ಣನ್ನು ಹಾಯಿಸಿದರೆ ಇಂತಹವರು ಎಷ್ಟು ಜನ ನಮಗೆ ಸಿಗುತ್ತಾರೆ? ಅವರು ಉತ್ತರ ಪ್ರದೇಶದವರಾಗಿದ್ದರೂ ಕೂಡ ಎಲ್ಲಾ ಪ್ರದೇಶದವರ. ಜೊತೆಗೂ ಸಂಪೂರ್ಣವಾಗಿ ಮಿಳಿತಗೊಳ್ಳುತ್ತಿದ್ದರು. ಮತ್ತು ತಾನೂ ಅವರೊಬ್ಬರಂತೆ ವರ್ತಿಸುತ್ತಿದ್ದರು ಮತ್ತೊಬ್ಬರನ್ನು ನಾವು ನೋಡಿದಾಗ ನಮಗೆ ಮತ್ತೊಂದು ಪ್ರದೇಶದ ಚಿತ್ರ ಬರುತ್ತದೆ. ಇಡೀ ಹಿಂದೂಸ್ತಾನದ ಚಿತ್ರ ನಮ್ಮ ಕಣ್ಣು ಮುಂದೆ ಬರುವುದಿಲ್ಲ. ಆದರೆ ಶ್ರೀಮತಿ ಇಂದಿರಾ ಗಾಂಧಿಯವರನ್ನು ನಾವು ಯಾವಾಗಲೂ

ನೋಡಿದಾಗ, ಅವರು ಸಮಗ್ರ ಭಾರತದ ಚಿತ್ರವನ್ನು ನಮ್ಮ ಎದುರಿಗೆ ಇಟ್ಟರೇ ಹೊರತು ಯಾವುದೇ ಒಂದು ಭಾಗವನ್ನು ಅವರು ಎಂದೂ ಪ್ರತಿನಿಧಿಸಲಿಲ್ಲ. ಆದೇರೀತಿ ಏನು ನಾವು ಸೆಕ್ಯುಲರಿಸಂ ವಿಚಾರದಲ್ಲಿ ಇಷ್ಟು ಮಾತನಾಡುತ್ತೇವೆ, ನಿಜವಾದ ಅರ್ಥದಲ್ಲಿ ಸೆಕ್ಯುಲರ್ ಆಗಿರತಕ್ಕಂಥ ಕೆಲವೇ ವ್ಯಕ್ತಿಗಳಲ್ಲಿ ಅವರೂ ಒಬ್ಬರಾಗಿದ್ದರು. ಈ ೧೮ ವರ್ಷಗಳ ಮಧ್ಯದಲ್ಲಿ ಎರಡು ವರ್ಷ ಅವರು ಪ್ರಧಾನಮಂತ್ರಿಗಳಾಗಿರಲಿಲ್ಲ. ಭಾರತ ದೇಶದ ರಾಜಕಾರಣದಲ್ಲಿ ಅವರು ಪ್ರಧಾನಮಂತ್ರಿಗಳಾಗಿದ್ದಂಥ ಕಾಲದಲ್ಲಿ ಎಷ್ಟು ಪ್ರಭಾವ ಶಾಲಿಗಳಾಗಿದ್ದರೋ ಪ್ರಧಾನಮಂತ್ರಿಗಳಾಗದೇ ಇದ್ದಂಥ ಕಾಲದಲ್ಲೂ ಅಷ್ಟೇ ಪ್ರಭಾವಶಾಲಿ ಗಳಾಗಿದ್ದರು. ಆ ಎರಡು ವರ್ಷಗಳಲ್ಲಿ ಅವರು ಪರಿಸ್ಥಿತಿಯನ್ನು ಎದುರಿಸಿದಂಥ ರೀತಿ ನಮ್ಮಲ್ಲೂ ಕೂಡ ಅನೇಕ ಜನರಿಗೆ ವಿಸ್ಮಯವನ್ನು ಮತ್ತು ಅಭಿಮಾನವನ್ನು ಹುಟ್ಟಿಸಿತು. ನಾನು ಈಗತಾನೇ ಹೇಳಿದೆ, ರಾಜಕೀಯದಲ್ಲಿ ಕೆಲವೇ ಜನರಿಗೆ ಮಾತ್ರ ಈ ಭಾಗ್ಯ ಸಿಗುತ್ತದೆ ಎಂದು. ರಾಜಕಾರಣದಲ್ಲಿ ಒಬ್ಬ ಎತ್ತರದ ಮುಂದಾಳಾಗಿ ಅವರು ಅನೇಕ ವಿಷಯಗಳನ್ನು ಸಾಧಿಸಿದ್ದಾರೆ, ಇಲ್ಲ ಎಂದು ಹೇಳುವುದಿಲ್ಲ. ಆದರಲ್ಲೂ ಎಲ್ಲಕ್ಕಿಂತ ಹೆಚ್ಚು ಮತ್ತು ಅತ್ಯಂತ ಎದ್ದು ಕಾಣತಕ್ಕಂಥ ದೊಡ್ಡ ಸಾಧನೆ ಏನೆಂದರೆ ಪ್ರಪಂಚದ ದೃಷ್ಟಿಯಲ್ಲಿ ನಮ್ಮ ದೇಶದ ಕೀರ್ತಿಯನ್ನು ಹೆಚ್ಚಿಸಿದ್ದು. ಆಕಸ್ಮಿಕವಾಗಿ ಅವರು ಕೊಲೆಯಾದಾಗ ನಾನು ಇಲ್ಲಿ ಇರಲಿಲ್ಲ. ಇದ್ದಿದ್ದರೆ ಆಗ ನನಗೆ ಕಣ್ಣಾರೆ ನೋಡತಕ್ಕ ಅವಕಾಶ ಸಿಗುತ್ತಿತ್ತು. ನಮ್ಮ ಭಾರತದ ಹೊರಗಡೆ ಅವರ ಪ್ರಭಾವ ಎಷ್ಟಿತ್ತು, ಅವರ ಬಗ್ಗೆ ಜನರ ಪ್ರೀತಿ ಮತ್ತು ಅಭಿಮಾನ ಎಷ್ಟಿತ್ತು ಎಂದು ಹೇಳುವುದಾದರೆ, ಅಲ್ಲಿ ಕಳೆದ ೧೦–೧೫ ವರ್ಷಗಳಿಂದ ಭಾರತ ದೇಶ ಅಂದರೆ ಇಂದಿರಾಗಾಂಧಿ ಎನ್ನುವಷ್ಟರಮಟ್ಟಿನ ಪ್ರಭಾವ ಅಲ್ಲಿಯ ಜನರ ಮೇಲೆ ಇವರ ವ್ಯಕ್ತಿತ್ವ ಪರಿಣಾಮ ಬೀರಿದೆ. ಆದೇರೀತಿ ಅವರ ವಂಶದ್ದೊಂದು ಕೊಡುಗೆ ನಮ್ಮ ರಾಷ್ಟ್ರದ ವಿದೇಶೀ ನೀತಿ. ಯಾವ ಒಂದು ಹೆಂದರವನ್ನು ಅಥವಾ ಪಾಯವನ್ನು ನಮ್ಮ ವಿದೇಶೀ ನೀತಿಗೆ ಪಂಡಿತ ಜವಹರಲಾಲ್ ನೆಹರೂರವರು ಹಾಕಿ ಹೋದರೋ ಅದನ್ನು ಅದ್ಭುತವಾದಂಥ ಕುಶಲತೆಯಿಂದ, ಯುಕ್ತಿಯನ್ನು ಬಳಸಿ ಯಾವುದೇ ಒಂದು ದೇಶಕ್ಕೂ ವಿರೋಧವನ್ನು, ಅಥವಾ ವಿರೋಧದ ಭಾವನೆಯನ್ನೂ ಕೂಡ ಉಂಟುಮಾಡದೆ ಆ ನೀತಿಯನ್ನು ಅನುಸರಿಸಿಕೊಂಡು ಬಂದರು. ಇದು ಮೂರನೇ ಪ್ರಪಂಚಕ್ಕೆ ಒಂದಂ ಹೊಸ ಚೈತನ್ಯವನ್ನು ಕೊಟ್ಟಿತ್ತು. ಈ ಮೂರನೇ ಪ್ರಪಂಚದ ಅನೇಕ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ, ಹಿಂದುಳಿದ ರಾಷ್ಟ್ರಗಳಲ್ಲಿ ಯಾವುದೇ ಒಂದು ಸಂಕಷ್ಟದ ಪರಿಸ್ಥಿತಿ ಉಂಟಾದಾಗ ಅಥವಾ ಈ ಮೂರನೇ ಪ್ರಪಂಚದಲ್ಲಿ ಒಂದಂ ಸಮಸ್ಯೆ ಉಂಟಾದಾಗ ಅದರ ಪರಿಹಾರದ ಬಗ್ಗೆ ಅವರೆಲ್ಲರೂ ಶ್ರೀಮತಿ ಇಂದಿರಾಗಾಂಧಿಯವರ ಕಡೆಗೆ, ಅಂದರೆ ನಮ್ಮ ಭಾರತದ ಕಡೆಗೆ ನೋಡುತ್ತಾ ಇದ್ದರು.

ಇನ್ನು ನಮ್ಮ ದೇಶದ ವಿಚಾರಕ್ಕೆ ಬರುವುದಾದರೆ, ಅವರು ಅನುಸರಿಸಿದಂಥ ನೀತಿ ಬಗ್ಗೆ ಭಿನ್ನಾಭಿಪ್ರಾಯ ಇರಬಹುದು ಯಾರು ಎಷ್ಟೇ ಭಿನ್ನಾಭಿಪ್ರಾಯವನ್ನು ಇಟ್ಟುಕೊಂಡಿರಲಿ, ಅವರ ರಾಷ್ಟ್ರ ಪ್ರೇಮದ ವಿಚಾರದಲ್ಲಿ ಮಾತ್ರ ಯಾರೂ ಕೂಡ ಎಂದೆಂದೂ ಕನಸುಮನಸಿನಲ್ಲೂ ಕೂಡ ಅನುಮಾನವನ್ನು ಪಡತಕ್ಕಂಥಾ ಅವಕಾಶವೇ ಇರಲಿಲ್ಲ. ಇಂದು ಈ ಘಳಿಗೆಯಲ್ಲಿ, ಅವರ ಜೀವನದಲ್ಲಿ ಮುಖ್ಯವಾಗಿ ಅವರು ಈ ದೇಶದಲ್ಲಿ ನೇತೃತ್ವವನ್ನು ವಹಿಸಿಕೊಂಡಂಥ ಕಾಲದಲ್ಲಿ ನಮ್ಮ ದೇಶಕ್ಕೆ ಮತ್ತು ಪ್ರಪಂಚಕ್ಕೆ ಕೊಟ್ಟಂಥ ದೇಣಿಗೆ ಏನು, ಮಾಡಿದಂಥ ಸೇವೆಯ ಮಹತ್ವ ಏನು ಎನ್ನುವುದರ ಬಗ್ಗೆ ಈಗಲೇ ಒಂದು ಅಂದಾಜನ್ನು ಮಾಡತಕ್ಕಂಥಾದ್ದು ಸಾಧ್ಯವಿಲ್ಲ. ಯಾವುದೇ ಒಬ್ಬ ದೊಡ್ಡ ವ್ಯಕ್ತಿ ನಿಧನರಾದ ತಕ್ಷಣ ಅವರ ಕೊಡುಗೆಯ ಬಗ್ಗೆ ನಾವು ತೂಕ ಮಾಡಿ ಹೇಳತಕ್ಕದ್ದು ಅಷ್ಟು ಸಾಧ್ಯವಾಗುವುದಿಲ್ಲ. ಮಹಾತ್ಮ ಗಾಂಧೀಜಿಯವರ ಬಗ್ಗೆಯಾಗಲಿ, ಜವಹರ್‌ಲಾಲ್ ನೆಹರೂರವರ ಬಗ್ಗೆಯಾಗಲಿ, ಅವರ ಸಿದ್ಧಾಂತ, ಅವರ ಆರ್ಥ ನೀತಿ, ಅವರು ಜೀವಂತ ಇದ್ದಾಗ ಎಷ್ಟು ಯುಕ್ತವಾಗಿ ನಮಗೆ ಕಾಣುತ್ತಿತ್ತು ಅದಕ್ಕೆ ನೂರುಪಟ್ಟು ಹೆಚ್ಚು ಯುಕ್ತವಾಗಿ ಇಂದು ಕಾಣುತ್ತದೆ. ಶ್ರೀಮತಿ ಇಂದಿರಾಗಾಂಧಿಯವರ ಕೊಡುಗೆ ಅಳೆಯತಕ್ಕದ್ದು ನಮಗೆ ಇವೊತ್ತು ಸಾಧ್ಯವಾಗುವುದಿಲ್ಲ. ನಮ್ಮ ದೇಶದ ಮುಂದೆ ಭೀಕರವಾದಂಥ ಪರಿಸ್ಥಿತಿ ಇದೆ. ಶ್ರೀಮತಿ ಇಂದಿರಾ ಗಾಂಧಿಯವರು ಪುನಃ ಪುನಃ ಒಂದಂ ಮಾತನ್ನು ಹೇಳುತ್ತಿದ್ದರು. ಈ ಮಾತನ್ನು ನಾವು ಟೀಕೆ ಮಾಡಿದ್ದೇವೆ. ಆ ಮಾತು ಏನೆಂದರೆ, ನಮ್ಮ ಕೇಂದ್ರಸರ್ಕಾರವನ್ನು ಬಲಪಡಿಸಬೇಕೆಂದು ಹೇಳಿ ಹೇಳುತ್ತಿದ್ದರು. ಕೇಂದ್ರ ಸರ್ಕಾರ ಸುಭದ್ರವಾಗಿರಬೇಕು ಮತ್ತು ಬಲಿಷ್ಠವಾಗಿರಬೇಕೆಂದು ಹೇಳುವುದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಆದರೆ ಅವರು ನಿಧಾನರಾದಮೇಲೆ ಇಂದು ಅವರು ಹೇಳಿದಂಥ ವಾತಾವರಣಕ್ಕೆ

ಇನ್ನಷ್ಟು ಬೆಲೆ ಬಂದಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಕೇಂದ್ರವನ್ನು ಅಬಲಗೊಳಿಸಿ ರಾಜ್ಯಗಳು ಉಳಿಯಲಾರವು. ಹಾಗೆಯೇ ನಮ್ಮ ಅಭಿಪ್ರಾಯದಲ್ಲಿ ರಾಜ್ಯಸರ್ಕಾರವನ್ನು ಅಬಲ ಮಾಡಿ ಕೇಂದ್ರ ಸರ್ಕಾರ ಬಲಿಷ್ಠವಾಗುವುದು ಸಾಧ್ಯವಿಲ್ಲ. ನಮ್ಮ ದೇಶವನ್ನು ಒಗ್ಗಟ್ಟಿನಲ್ಲಿ ಇಟ್ಟು ದೇಶದ ಭದ್ರತೆಯನ್ನು ಕಾಪಾಡಿಕೊಂಡು ಹೋಗಲಿಕ್ಕೆ ಒಬ್ಬ ಅತ್ಯಂತ ಸಮರ್ಥ ಹಾಗೂ ಶಕ್ತಿಯುತವಾದಂಥ ವ್ಯಕ್ತಿ ಇರಲೇಬೇಕು. ಇದು ಒಂದು ವೈಪರೀತ್ಯ ಎಂದು ನಾನು ಹೇಳುತ್ತೇನೆ. ನಮ್ಮಲ್ಲಿ ಅನೇಕ ಜನರು ನಮ್ಮ ದೇಶದ ಇಂಟೆಲಿಜೆನ್ಸ್ ವ್ಯವಸ್ಥೆ ಬಗ್ಗೆ ಹೆಚ್ಚು ಖರ್ಚು ಮಾಡುತ್ತೇವೆಂದು ಹೇಳಿ ಟೀಕೆ ಮಾಡಿದ್ದು ಉಂಟು. ಜನತಾ ಸರ್ಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಾಗ ಅಂದಿನ ಪ್ರಧಾನ ಮಂತ್ರಿಗಳಾಗಿದ್ದ ಮಾನ್ಯ ಮೊರಾರ್ಜಿ ದೇಸಾಯಿ ಅವರು ನಮಗೆ ಇಂಟೆಲಿಜೆನ್ಸ್ ಬೇಕಾಗಿಲ್ಲ, ಇಷ್ಟೊಂದು ಸಿಬ್ಬಂದಿ ಬೇಕಾಗಿಲ್ಲ ಎಂದು ಅದನ್ನು ಡಿಸ್‌ಬ್ಯಾಂಡ್ ಮಾಡಿದರು. ಶ್ರೀಮತಿ ಇಂದಿರಾ ಗಾಂಧಿಯವರ ಹತ್ಯೆ ಯಾವರೀತಿ ಆಯಿತು ಅದನ್ನು ನೋಡಿದರೆ, ನಮಗೆ ಇಷ್ಟೊಂದು ಇಂಟೆಲಿಜೆನ್ಸ್ ಇದ್ದರೂ ಏನು ಪ್ರಯೋಜನ ಎನ್ನುವ ಭಾವನೆ ಬರುತ್ತದೆ. ಅವರ ರಕ್ಷಣೆಗೋಸ್ಕರ ಇದ್ದಂತಹವರು ಯಾವರೀತಿ ಅವರ ಮೇಲೆ ಕೈ ಎತ್ತಿದರೋ ನನಗೆ ಅರ್ಥವಾಗುವುದಿಲ್ಲ. ಇದು ಅತ್ಯಂತ ಅತಾಗಾರಿಕವಾದಂಥ, ಅಮಾನುಷವಾದಂಥ ಘಟನೆ. ನಮ್ಮ ದೇಶ ಇದರಿಂದ ಚೇತರಿಸಿಕೊಳ್ಳುವುದು ಬಹಳ ಕಷ್ಟ. ಶ್ರೀಮತಿ ಇಂದಿರಾ ಗಾಂಧಿಯವರು ನಮ್ಮನ್ನು ಅಗಲಿ, ದೇಶವನ್ನು ಬಿಟ್ಟು ಹೋದರೂ ಮುಖ್ಯವಾಗಿ ದೇಶದ ಬಡ ಜನತೆಯ ಮೇಲೆ ಅವರ ವ್ಯಕ್ತಿತ್ವ ಮತ್ತು ಅವರ ಚಿತ್ರ ಅಚ್ಚಳಿಯದಂತೆ ಬಹಳ ದೀರ್ಘ ಕಾಲ ಇರುವುದರಲ್ಲಿ ನಮಗೇನೂ ಸಂದೇಹ ಇಲ್ಲ. ನಾನು ನಮ್ಮ ಪಕ್ಷದ ಪರವಾಗಿ ಈ ಕಡೆ ಕುಳಿತಂತಹ ಸದಸ್ಯರ ಪರವಾಗಿ, ಮತ್ತು ಸರ್ಕಾರದ ಪರವಾಗಿ, ಹೃದಯದ ಅಂತರಾಳದಿಂದ ಭಾಷ್ಪಾಂಜಲಿಯನ್ನು ಶ್ರೀಮತಿ ಇಂದಿರಾಗಾಂಧಿಯವರಿಗೆ ಅರ್ಪಿಸುತ್ತೇನೆ ಮತ್ತು ನಮ್ಮ ದೇಶದಲ್ಲಿ ಇಂತಹ ದುರ್ಘಟನೆ ಮುಂದೆಂದೂ ಆಗದಿರಲಿ ಎಂದು ಹಾರೈಸುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ (ವಿರೋಧಪಕ್ಷದ ನಾಯಕರು).—ಸನ್ಮಾನ್ಯ ಅಧ್ಯಕ್ಷರೆ, ದಿನಾಂಕ ೩೧ನೇ ಅಕ್ಟೋಬರ್ ೧೯೮೪ ನಮ್ಮ ದೇಶದ ಚರಿತ್ರೆಯಲ್ಲೇ ಒಂದು ಕರಾಳ ದಿನ. ಅಂದು ರಾಷ್ಟ್ರದಲ್ಲಿಯೇ ಒಬ್ಬ ಶ್ರೇಷ್ಠ ಮುತ್ಸದ್ದಿಯಾಗಿ, ಶಾಂತಿದೂತರಾಗಿ ವಿಶ್ವನಾಯಕಿ ಶ್ರೀಮತಿ ಇಂದಿರಾಗಾಂಧಿಯವರು ಕಣ್ಮರೆಯಾದರು. ಅಂದು ಈ ದೇಶದ ಜನ ಮಾತ್ರವಲ್ಲ, ವಿಶ್ವದ ಮಾನವ ಜನಾಂಗವೇ ಕಣ್ಣೀರು ಸುರಿಸಿತು. ಒಂದು ರೀತಿಯಲ್ಲಿ ಹೇಳುವುದಾದರೆ ಅವರು ಇಡೀ ವಿಶ್ವವನ್ನು ತಬ್ಬಲಿಮಾಡಿ ಹೋದರು ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು ಎಲ್ಲರೂ ಈ ರೀತಿ ಮಾತನಾಡುವುದನ್ನು ಸಹ ನಾವು ಕೇಳಿದ್ದೇವೆ. ಮತ್ತು ಆ ಅನುಭವವನ್ನು ಕೂಡ ನಾವು ಪಡೆದಿದ್ದೇವೆ.

ಶ್ರೀಮತಿ ಇಂದಿರಾಗಾಂಧಿಯವರು ಇಲ್ಲದೇ ಇರತಕ್ಕಂಥ ದಿನವನ್ನು ನಾವು ನೆನಪಿಸಿಕೊಳ್ಳಲಿಕ್ಕೂ ಕೂಡ ಅನೇಕ ಬಾರಿ ಕಷ್ಟವಾಗುತ್ತದೆ. ಅವರು ನಮ್ಮೆಲ್ಲರ ಜೊತೆಯಲ್ಲಿ ಇದ್ದಾರೆನ್ನುವ ರೀತಿಯಲ್ಲಿ ಮನೋಭಾವನೆಯನ್ನು ಬಿಟ್ಟು ಹೋಗಿದ್ದಾರೆ. ಸನ್ಮಾನ್ಯ ಮುಖ್ಯ ಮಂತ್ರಿಗಳು, ಮಾತನಾಡುತ್ತಾ ಶ್ರೀಮತಿ ಇಂದಿರಾಗಾಂಧಿಯವರು ರಾಷ್ಟ್ರದಲ್ಲಿ ಮಾಡಿದಂಥ ಸಾಧನೆಗಳ ಪಾತ್ರ, ವಿಶ್ವದ ಜನತೆಗೆ, ಮಾನವ ಕುಲಕ್ಕೆ ಅವರು ಕೊಟ್ಟಂತಹ ಕೊಡುಗೆ ಅದು ಸೀಮಿತವಾದುದು ಅದನ್ನು ಯಾವ ಮಾನದಂಡದಿಂದ ಕೂಡ ಅಳೆಯಲಿಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳಿದರು. ಅದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಶ್ರೀಮತಿ ಇಂದಿರಾಗಾಂಧಿಯವರು ಒಬ್ಬ ಮಹಿಳೆಯಾಗಿ ಇವತ್ತು ರಾಷ್ಟ್ರಕ್ಕೆ ಅಪಾರ ಕೀರ್ತಿ ತಂದಿದ್ದಾರೆ. ದೇಶದಲ್ಲಿ ರಾಷ್ಟ್ರಾಭಿಮಾನ ಉಳಿದು ಬಾಳುವ ಹಾಗೆ, ಮತ್ತು ರಾಷ್ಟ್ರ ಮುಂದೆ ಬೆಳೆಯಲಿ ಎಂದು ಹೇಳಿದ್ದಾರೆ. ೩೧ನೇ ಅಕ್ಟೋಬರ್ ೧೯೮೪ರಂದು ಅವರು ಭುವನೇಶ್ವರದಲ್ಲಿ ಮಾಡಿದಂಥ ಭಾಷಣ ರಾಷ್ಟ್ರದ ಪ್ರತಿಯೊಬ್ಬ ಪ್ರಜೆಯೂ ಕೂಡ ನೆನಪಿನಲ್ಲಿಟ್ಟುಕೊಳ್ಳಬೇಕಾದಂಥ ವಿಷಯ ತನ್ನ ಕೊನೆಯ ಬಿಂದು, ರಕ್ತ ಕೂಡ ಈ ರಾಷ್ಟ್ರದ ಐಕ್ಯತೆಗೆ, ಈ ರಾಷ್ಟ್ರದ ಶಕ್ತಿಗೆ ಉಪಯೋಗವಾಗಲಿ ಎಂದು ಅವರು ಸಾರಿದಂಥ ಮರುದಿವಸವೇ ಒಬ್ಬ ಮತಾಂಧನ ಗುಂಡೇಟಿಗೆ ಬಲಿಯಾಗಬೇಕಾದ ಪ್ರಸಂಗ ಬಂತು.

ಶ್ರೀಮತಿ ಇಂದಿರಾಗಾಂಧಿಯವರು ಈ ದೇಶದಲ್ಲಿ ಒಂದು ದೊಡ್ಡ ಧ್ವನಿಯಾಗಿದ್ದರು. ಅದರಲ್ಲಿಯೂ ಕೂಡ ಬಡವರಿಗೆ, ದೀನದಲಿತರಿಗೆ ಜೀವನದಲ್ಲಿ ಹೊಸ ಹುರುಪು, ವಿಶ್ವಾಸ ಹಾಗೂ ಭರವಸೆಗಳನ್ನು ತುಂಬಿಕೊಟ್ಟರು, ಬಡವರ ಮತ್ತು ದೀನದಲಿತರ ಭಾಷೆಯಲ್ಲಿಯೇ ಹೇಳುವುದಾದರೆ ನಮ್ಮ ಅಮ್ಮ ಇನ್ನಿಲ್ಲ ಎಂದು ಹೇಳುವಂಥ ಆತ್ಮೀಯ ಕೂಗು ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಕೇಳಿ

ಬರುತ್ತಿತ್ತು. ದೀನದಲಿತರ ಜೀವನದಲ್ಲಿ ಯಾವುದೇ ಪರಿವರ್ತನೆ ಮಾಡಲಿಕ್ಕೆ ಹೊರಟರು. ರಾಜಕೀಯ ಸ್ವಾತಂತ್ರ್ಯವನ್ನು ಪಡೆದಂಥ ನಮ್ಮ ರಾಷ್ಟ್ರದಲ್ಲಿ ಭೌಗೋಳಿಕವಾಗಿ, ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಅಸಮಾನತೆಯುಳ್ಳ ರಾಷ್ಟ್ರದಲ್ಲಿ ಸಮಾನತೆಯನ್ನು ಸ್ಥಾಪನೆ ಮಾಡಲಿಕ್ಕೆ ನಿಷ್ಠೂರವಾಗಿ ಶ್ರೀಮತಿ ಇಂದಿರಾಗಾಂಧಿಯವರು ದುಡಿದರು. ಆರ್ಥಿಕವಾಗಿ, ಸಾಮಾಜಿಕವಾಗಿ ಶ್ರೀಮತಿ ಇಂದಿರಾಗಾಂಧಿಯವರು ತಮ್ಮ ಕಾಲದಲ್ಲಿ ಈ ರಾಷ್ಟ್ರವನ್ನು ಇನ್ನೂ ಹತ್ತು ವರ್ಷಗಳ ಕಾಲ ಮುನ್ನಡೆಸಿ, ಭರತಖಂಡವನ್ನು ಸೂಪರ್ ಪವರ್ ರಾಷ್ಟ್ರಗಳ ಸಾಲಿನಲ್ಲಿ ಸೇರಿಸತಕ್ಕ ದೃಷ್ಟಿಯಿಂದ ಹೋಗುತ್ತಿದ್ದಾರೆ ಎನ್ನುವ ಮಾತುಗಳನ್ನು ವಿಶ್ವದ ಅನೇಕ ದೊಡ್ಡ ದೊಡ್ಡ ನಾಯಕರುಗಳು ದೆಹಲಿಗೆ ಬಂದಾಗ ಹೇಳಿದಂತಹ ಮಾತುಗಳನ್ನು ನಾವುಗಳೆಲ್ಲಾ ಕೇಳಿದ್ದೇವೆ. ಅಂಥ ಒಂದು ಉನ್ನತ ವ್ಯಕ್ತಿತ್ವವನ್ನು ಗಳಿಸಿಕೊಂಡಂಥ ಶ್ರೀಮತಿ ಇಂದಿರಾಗಾಂಧಿಯವರ ಬಗ್ಗೆ ಭಾರತದ ಪ್ರತಿಯೊಬ್ಬ ಪ್ರಜೆ ಕೂಡ ಅಭಿಮಾನವನ್ನು ಪಡೆಯಬೇಕಾಗಿದೆ. ಇಂಥ ಒಂದು ಸಾಧನೆಯನ್ನು ಅವರು ಮಾಡುವಾಗ ಅನೇಕ ಕಷ್ಟನಷ್ಟಗಳನ್ನು ಎದುರಿಸಬೇಕಾದ ಪ್ರಸಂಗ ಬಂದರೂ, ತಾನು ಹಿಡಿದಂಥ ಸಿದ್ಧಾಂತವನ್ನು ಸಾಧನೆ ಮಾಡುವ ಸಂದರ್ಭದಲ್ಲಿ ವೈಯಕ್ತಿಕವಾಗಿ ಬರುತ್ತಿದಂಥ ಅಪಾಯಗಳನ್ನು, ಕಷ್ಟಗಳನ್ನೆಲ್ಲ ಮರೆತು ಮುಂದೆ ಸಾಗುತ್ತಿದ್ದಂಥ ಸ್ಥೈರ್ಯದಿಂದ ತುಂಬಿದಂಥ ಧೀರ ಮಹಿಳೆ ಶ್ರೀಮತಿ ಇಂದಿರಾಗಾಂಧಿಯವರು. ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ರಾಷ್ಟ್ರವನ್ನು ಮುನ್ನಡೆಸುವಂಥ ಸಂದರ್ಭದಲ್ಲಿ ರಾಷ್ಟ್ರದ ಒಳಗಿರತಕ್ಕಂಥ ವಿಚಿದ್ರಕಾರಕ ಶಕ್ತಿಗಳನ್ನು ಉಪಯೋಗಿಸಿಕೊಂಡು ಅನೇಕ ವಿದೇಶಿ ಶಕ್ತಿಗಳು ಪಿತೂರಿ ಮಾಡಿದಾಗ ಮತ್ತು ರಾಷ್ಟ್ರ ಬುಡಮೇಲು ಮಾಡತಕ್ಕಂಥ ಅನೇಕ ವಿಚಾರಗಳು ಎದ್ದಾಗ ಶ್ರೀಮತಿ ಇಂದಿರಾಗಾಂಧಿಯವರು ಅವುಗಳನ್ನು ಧೈರ್ಯದಿಂದ ಎದುರಿಸಿದರು. ರಾಷ್ಟ್ರಕ್ಕೆ ಬಂದಂಥ ಸವಾಲುಗಳು, ಇವು ಇಂದಿರಾಗಾಂಧಿಗೆ ಬಂದಂಥ ಸವಾಲುಗಳಲ್ಲ ಎಂದು ಜನತೆಯನ್ನು ವಿಶ್ವಾಸದಲ್ಲಿ ತೆಗೆದುಕೊಂಡು ಮುಂದೆ ಹೋದರು. ನಮ್ಮದು ವಿಶಿಷ್ಟವಾದಂಥ ರಾಷ್ಟ್ರ ಇಲ್ಲಿ ನೂರಾರು ಭಾಷೆಗಳು ಇವೆ. ನೂರಾರು ಜಾತಿ ಮತಗಳು ಇವೆ, ಒಂದೊಂದು ಭಾಷೆಗೂ ಒಂದೊಂದು ದೇಶ, ಒಂದೊಂದು ಪ್ರದೇಶಕ್ಕೆ ಒಂದೊಂದು ದೇಶ. ಪ್ರಚಲಿತ ವಿಶ್ವದ ರಾಜಕಾರಣದಲ್ಲಿ ಎಲ್ಲ ಜನತೆಯನ್ನು ಎಲ್ಲ ಭಾಷೆಯವರನ್ನು ಒಂದೇ ಘಟ್ಟದಲ್ಲಿ ನಡೆಸಿಕೊಂಡು ಹೋಗಿ ಸಮನ್ವಯತೆಯನ್ನು ಸಾಧನೆ ಮಾಡತಕ್ಕಂತಹ ದಾರಿಯಲ್ಲಿ ಶ್ರೀಮತಿ ಇಂದಿರಾಗಾಂಧಿಯವರು ಹತ್ಯೆಯಾದರು ರಾಷ್ಟ್ರದ ಐಕ್ಯತೆಗಾಗಿ ಸಮಗ್ರತೆಗಾಗಿ ಶಾಂತಿಗಾಗಿ ಅವರ ಬಲಿಯಾಯಿತು. ೧೯೪೮ರಲ್ಲಿ ಮಹಾತ್ಮ ಗಾಂಧೀಜಿಯವರು ಜಾತ್ಯಾತೀತ ತತ್ವಕ್ಕಾಗಿ ಪ್ರಾಣವನ್ನು ಬಲಿಕೊಟ್ಟ ಮೇಲೆ ೩೭ ವರ್ಷಗಳ ನಂತರ ರಾಷ್ಟ್ರದ ಪ್ರಜಾಪ್ರಭುತ್ವ ಬಲಿದಾನದ ನೆರಳಿನಲ್ಲಿ ಪುನಃ ನಡೆದುಕೊಂಡು ಬಂದಿದೆ. ಜಾತ್ಯಾತೀತ ತತ್ವ ಆಧಾರಸ್ತಂಭ ಕುಸಿಯುತ್ತಿರುವುದನ್ನ ತಪ್ಪಿಸಲು ತಮ್ಮ ಪ್ರಾಣವನ್ನೇ ಬಲಿದಾನ ಮಾಡಿದರು. ಈ ದೇಶವನ್ನು ನಿರಂತರವಾಗಿ ಆರ್ಥಿಕ ಸಾಮಾಜಿಕ ರಾಜಕೀಯ ಕ್ಷೇತ್ರದಲ್ಲಿ ಮುನ್ನಡೆಸಿದರು. ಅವರು ಸತ್ತಮೇಲೂ ಕೂಡ ರಾಷ್ಟ್ರದಲ್ಲಿ ನಿರಂತರವಾಗಿ ಉಳಿಯುವಂತಹ ಕೆಲಸಕಾರ್ಯಗಳನ್ನು ಶ್ರೀಮತಿ ಗಾಂಧಿಯವರು ಮಾಡಿದ್ದಾರೆ. ಅವರ ಒಂದು ತತ್ವ ಆದರ್ಶ ಚಿಂತನೆ ನಮ್ಮ ರಾಷ್ಟ್ರದಲ್ಲಿ ಉಳಿಯಬೇಕು. ಅವರ ರಾಷ್ಟ್ರಾಭಿಮಾನ ಬಲಿದಾನದ ಹಿನ್ನೆಲೆಯಲ್ಲಿ ನಡೆದರೂ ಅವರು ಬಿಟ್ಟುಹೋದಂಥಹ ಮೌಲ್ಯಗಳನ್ನು ನಾವು ಜಾರಿಗೆ ತರುವುದರಿಂದ ಮಾತ್ರ ನಾವು ಅವರಿಗೆ ಹೆಚ್ಚಿನ ಶ್ರದ್ಧಾಂಜಲಿಯನ್ನು ಅರ್ಪಿಸಿದಂತಾಗುತ್ತದೆ. ಇವತ್ತು ಭಾರತಕ್ಕೆ ಹಿಮಾಲಯ ಪರ್ವತ ಯಾವ ರೀತಿ ರಕ್ಷಣೆಗೆ ನಿಂತಿದೆಯೋ ಹಾಗೆ ನಮ್ಮ ಸಂಸ್ಕೃತಿ ಮತ್ತು ಸ್ವಾತಂತ್ರ್ಯವನ್ನು ರಕ್ಷಣೆ ಮಾಡತಕ್ಕಂತಹ ಕೆಲಸವನ್ನು ಶ್ರೀಮತಿ ಇಂದಿರಾಗಾಂಧಿಯವರು ಮಾಡಿದರು. ಸಾಮಾಜಿಕ ಆರ್ಥಿಕ ಸ್ವಾತಂತ್ರ್ಯ ರಾಷ್ಟ್ರದ ದೀನದಲಿತರಿಗೆ ಬರದ ಹೊರತು ಸ್ವಾತಂತ್ರ್ಯಕ್ಕೆ ಬೆಲೆ ಇಲ್ಲ ಎನ್ನುವ ಮಾತನ್ನು ಪದೇ ಪದೇ ಹೇಳುತ್ತಿದ್ದರು. ಅದೇ ಪ್ರಕಾರ ಅವರು ಸತ್ತಮೇಲೆ ತನ್ನ ಭಸ್ಮವನ್ನು ಹಿಮಾಲಯ ಪರ್ವತದ ಮೇಲೆ ಹರಡಬೇಕು, ಹಿಮಾಲಯದಂತೆ ಅವರ ಜೀವವೂ ಕೂಡ ದೇಶ ರಕ್ಷಣೆಗೆ ಸದಾ ಇರಬೇಕು ಎನ್ನುವ ಆಸೆ ಇತ್ತು. ಅವರ ಚಿಂತನೆ ಮತ್ತು ಆದರ್ಶ ನಮ್ಮ ಬಾಳಿನಲ್ಲಿ ಬರಲಿ. ಮಾನ್ಯ ಸಭಾ ನಾಯಕರು ಹೇಳಿದ ಪ್ರಕಾರ ಅವರು ಅರ್ಪಿಸತಕ್ಕಂತಹ ಶ್ರದ್ಧಾಂಜಲಿ ರಾಷ್ಟ್ರದ ಐಕ್ಯತೆ, ಸಮಗ್ರತೆ, ಮತ್ತು ಚೈತನ್ಯಕ್ಕೆ ಪುಷ್ಟಿಯನ್ನು ಕೊಟ್ಟು ರಾಷ್ಟ್ರವನ್ನು ಉಳಿಸಿ ಕಟ್ಟತಕ್ಕಂತಹ ದೃಷ್ಟಿಯಿಂದ ಹೆಚ್ಚಿನ ಶಕ್ತಿ ಕೊಡಲೆಂದು ಈ ಸಂದರ್ಭದಲ್ಲಿ ಹೇಳಿ, ವಿರೋಧಪಕ್ಷದ ಪರವಾಗಿ, ಸದನದ ಸದಸ್ಯರ ಪರವಾಗಿ, ಕರ್ನಾಟಕ ರಾಜ್ಯದ ಜನತೆಯ ಪರವಾಗಿ ವಿಶೇಷವಾದಂತಹ ಶ್ರದ್ಧಾಂಜಲಿಯನ್ನು ಅರ್ಪಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟಂತಹ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿ. ಎಸ್. ಆಚಾರ್ಯ (ಉಡುಪಿ).--ಸಭಾನ್ಯ ಅಧ್ಯಕ್ಷರೆ, ಅಕ್ಟೋಬರ್ ೩೧ನೇ ತಾರೀಖು ನಮ್ಮ ದೇಶದ ಪ್ರಧಾನ ಮಂತ್ರಿಗಳಾಗಿದ್ದಂತಹ ಶ್ರೀಮತಿ ಇಂದಿರಾಗಾಂಧಿಯವರ ಕೊಲೆ ಅತ್ಯಂತ ಕ್ರೂರವಾದ ರೀತಿಯಲ್ಲಿ ನಡೆದಿದೆ. ಅವತ್ತು ನಮ್ಮೆಲ್ಲರ ದುರ್ದೈವವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಇಂತಹ ಘಟನೆ ಈ ದೇಶದಲ್ಲಿ ನಡೆಯಂತ್ತದೆಂದು ಹೇಳುವಂತಹ ವಿಚಾರವನ್ನೇ ಯಾರೂ ಕೂಡ ಮಾಡದೇ ಇರುವ ಸಂದರ್ಭದಲ್ಲಿ ಅತ್ಯಂತ ಕ್ರೂರವಾದ ಹೇಯಕೃತ್ಯಕ್ಕೆ ಶ್ರೀಮತಿ ಗಾಂಧಿಯವರು ಒಳಗಾಗಿದ್ದಾರೆ. ಈ ಸಂದರ್ಭದಲ್ಲಿ ನಾನು ಮೃತರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ. ಶ್ರೀಮತಿ ಗಾಂಧಿಯವರು ಈ ದೇಶಕ್ಕೆ ಸುಮಾರು ೧೬ ವರ್ಷಗಳ ಕಾಲ ತಮ್ಮ ನೇತೃತ್ವದಲ್ಲಿ ಅಡಳಿತವನ್ನು ನಡೆಸಿದ್ದಾರೆನ್ನುವುದನ್ನು ನಾವು ಇಲ್ಲಿ ಸ್ಮರಿಸಬೇಕಾಗಿದೆ. ಅವರ ಅಧಿಕಾರಾವಧಿಯಲ್ಲಿ ಅನೇಕ ಏರಿಳಿತಗಳು ನಡೆದಿವೆ: ಅವರ ಜೀವನದಲ್ಲಿ ವೈಯಕ್ತಿಕವಾಗಿ ಸಾಕಷ್ಟು ಯಶಸ್ಸನ್ನು ಗಳಿಸಿದ್ದಾರೆ. ಕೆಲವೊಂದು ಸಂದರ್ಭಗಳಲ್ಲಿ ಅಪಯಶಸ್ಸು ನಡೆದಾಗ ದೇಶದೊಳಗೆ ಏನಾಯಿತು ಎಂಬುದನ್ನು ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಸಭಾನಾಯಕರು ಮಾತನಾಡುತ್ತಾ ತಿಳಿಸಿದ್ದಾರೆ. ಆ ಸಂದರ್ಭಗಳಲ್ಲಿ ಉದ್ಭವಿಸಿದಂತಹ ಪ್ರಶ್ನೆಗಳು, ಭಾಷೆಯ ಪ್ರಶ್ನೆ, ನೀರಿನ ಪ್ರಶ್ನೆ, ಇನ್ನಿತರ ಬೇರೆ ಬೇರೆ ಸಮಸ್ಯೆಗಳಿಗೆ ದೇಶ ಒಳಗಾದಾಗ ಬಂದಂತಹ ಪ್ರತ್ಯೇಕತೆಯ ಅಪಾಯವನ್ನು ಎದುರಿಸಿ ದೇಶದ ಏಕತೆಗಾಗಿ ಶ್ರೀಮತಿ ಇಂದಿರಾಗಾಂಧಿಯವರು ಒಳ್ಳೆಯ ನಾಯಕತ್ವವನ್ನು ಕೊಟ್ಟು ದೇಶವನ್ನು ಮುನ್ನಡೆಸಿಕೊಂಡು ಬಂದಿದ್ದಾರೆ. ಇದನ್ನು ನಾವೆಲ್ಲರೂ ಕೂಡ ಪ್ರಮುಖವಾಗಿ ಸ್ಮರಿಸಬೇಕಾಗಿದೆ. ಅವರು ಹಿಡಿದ ಕೆಲಸವನ್ನು ಯೋಚಿಸಿದ ರೀತಿಯಲ್ಲಿ ಮುನ್ನೆಡೆಸಿಕೊಂಡು ಹೋಗುವುದಕ್ಕೆ ತೋರಿಸಿದಂತಹ ಚಾಕಚಕ್ಯತೆ ಅದಕ್ಕೆ ಬೇಕಾದಂತಹ ಅನುಭವ, ಆ ಒಂದು ಧೈರ್ಯ, ಸಾಹಸವನ್ನು ವಂದಿನ ಜನಾಂಗದವರು ಶ್ರೀಮತಿ ಗಾಂಧಿಯವರಿಂದ ಕಲಿತುಕೊಳ್ಳಬೇಕಾಗಿದೆ. ಅವರ ಅಧಿಕಾರಾವಧಿಯಲ್ಲಿ ಕೆಲವೊಂದು ವಿಚಾರಗಳಲ್ಲಿ ಅವನತಿಯಾಗಿರಬಹುದು, ದೇಶದ ಅಭಿವೃದ್ಧಿ ಮತ್ತು ಇನ್ನಿತರ ವಿಚಾರಗಳಲ್ಲಿ ಅವರು ದೇಶವನ್ನು ವಂನ್ನೆಡೆಸಿಕೊಂಡು ಹೋಗಿದ್ದಾರೆ. ನಾವು ಪ್ರಜಾಪ್ರಭುತ್ವ ರಾಷ್ಟ್ರದಲ್ಲಿರತಕ್ಕವರು, ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಹಿಂಸೆಗೆ ಸ್ಥಾನವಿರಬಾರದು. ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಹಿಂಸೆಗೆ ಕಾರಣವೇನು ಎಂಬುದನ್ನು ನಾವು ಯೋಚನೆ ಮಾಡುವ ಸಂದರ್ಭ ಬಂದಿದೆ. ಇವತ್ತು ದೇಶದ ಏಕತೆ ಸಮಗ್ರತೆ ಬಗ್ಗೆ ಯೋಚನೆ ಮಾಡುವಂತಹ ಸಂದರ್ಭದಲ್ಲಿ, ಪ್ರಜಾಪ್ರಭುತ್ವವನ್ನು ಉಳಿಸಿಕೊಂಡಿರತಕ್ಕಂತಹ ನಮ್ಮ ದೇಶದಲ್ಲಿ ಪ್ರಧಾನಮಂತ್ರಿಗಳು ಹಿಂಸೆಗೆ ತುತ್ತಾಗಿದ್ದಾರೆ. ನಮ್ಮ ಈ ವ್ಯವಸ್ಥೆಯಲ್ಲಿ ಲೋಪದೋಷಗಳಿವೆಯೇ ಎಂಬುದನ್ನು ಯೋಚಿಸಬೇಕಾಗಿದೆ, ಅದರ ಬಗ್ಗೆ ಗಮನಹರಿಸಬೇಕಾಗಿದೆ. ಈ ದೇಶದಲ್ಲಿ ಈ ತರಹ ಘಟನೆಯಾಗಬಾರದಾಗಿತ್ತು. ಈ ದಿಶೆಯಲ್ಲಿ ಪ್ರತಿಯೊಬ್ಬರೂ ಕೂಡ ಅದರಲ್ಲೂ ದೇಶಾಭಿಮಾನಿಗಳು ಮತ್ತು ಸಾರ್ವಜನಿಕ ಜೀವನದಲ್ಲಿರುವವರು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿರತಕ್ಕ ಲೋಪದೋಷಗಳೇನೆಂಬುದನ್ನು ಕಂಡುಕೊಳ್ಳಬೇಕಾಗಿದೆ. ಶ್ರೀಮತಿ ಗಾಂಧಿಯವರ ನಿಧನದ ನಂತರ ನಡೆದಂತಹ ಕೆಲವು ಘಟನೆಗಳನ್ನು ನೋಡಿದರೆ, ಈ ದೇಶದಲ್ಲಿ ಹಿಂಸಾಚಾರ ಅವ್ಯವಸ್ಥೆ ಉಲ್ಬಣವಾಗುತ್ತಿದೆಯೆಂದು ಗೊತ್ತಾಗುತ್ತದೆ. ಶ್ರೀಮತಿ ಗಾಂಧಿಯವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸತಕ್ಕ ಈ ಸಂದರ್ಭದಲ್ಲಿ ನಾನು ಹೆಚ್ಚು ಉಲ್ಲೇಖ ಮಾಡದೆ, ದಿವಂಗತ ಆತ್ಮಕ್ಕೆ ಪರಮಾತ್ಮನು ಶಾಂತಿಯನ್ನು ಕೊಡಲಿ ಎಂದು ಪ್ರಾರ್ಥಿಸುತ್ತೇನೆ. ಅಂತೆಯೇ ಶ್ರೀಮತಿ ಗಾಂಧಿಯವರು ಧೈರ್ಯದಿಂದ ಸಾಹಸದಿಂದ ಮತ್ತು ಸದೃಢತೆಯಿಂದ ದೇಶವನ್ನು ಯಾವರೀತಿ ಮುನ್ನಡೆಸಿಕೊಂಡು ಹೋದರು ಅದು ಪ್ರತಿಯೊಬ್ಬರಿಗೂ ಮಾರ್ಗದರ್ಶನವಾಗಿ ಎಲ್ಲರಿಗೂ ದೇಶವನ್ನು ವಂನ್ನೆಡೆಸುವ ಸ್ಫೂರ್ತಿ ಸಿಗಲಿ ಎಂದು ಹಾರೈಸುತ್ತೇನೆ, ಈ ದುಷ್ಕೃತ್ಯದ ಹಿಂದೆ ಇರಬಹುದಾದ ದೇಶೀಯವಿದೇಶಿಯ ವಿರೋಧಿಗಳ ಒಳಸಂಚಿನ ಬಗ್ಗೆ ಸಾಕಷ್ಟು ತನಿಖೆಯಾಗಲಿಯೆಂದು ಹೇಳಿ, ನಮ್ಮೆಲ್ಲರಪರವಾಗಿ ಮತ್ತು ಭಾರತೀಯ ಜನತಾ ಪಕ್ಷದ ಪರವಾಗಿ ನಾನು ಮೃತರ ಆತ್ಮಕ್ಕೆ ಶ್ರದ್ಧಾಂಜಲಿಯನ್ನು ಅರ್ಪಿಸಬಯಸುತ್ತೇನೆ.

ಶ್ರೀ ಎಸ್. ಸೂರ್ಯನಾರಾಯಣರಾವ್ (ವರ್ತೂರು).--ಮಾನ್ಯ ಸಭಾಧ್ಯಕ್ಷರೆ, ಅಕ್ಟೋಬರ್ ೩೧ನೇ ತಾರೀಖು ನಡೆದಂತಹ ಹತ್ಯಾಕಾಂಡ ಇಡೀ ಜಗತ್ತನ್ನೆ ಚಕಿತಗೊಳಿಸಿದೆ. ಭಾರತ ದೇಶ ಜಾತ್ಯಾತೀತದೇಶ, ಇಲ್ಲಿ ಜನತೆಯನ್ನು ದಿಗ್ಭ್ರಮೆಗೊಳಿಸುವಂತಹ ಇಂತಹ ಕೆಲಸ ಹೇಗೆ ಸಾಧ್ಯವಾಯಿತು ? ಪ್ರಧಾನಿಯವರ ಅಂಗರಕ್ಷಕರೇ ಅವರನ್ನು ಬಲಿ ತೆಗೆದುಕೊಳ್ಳಬೇಕಾದರೆ ಇದರ

ಹಿಂದೆ ಯಾವ್ಯಾವ ಶಕ್ತಿಗಳು ಕೆಲಸ ಮಾಡಿವೆ ಎನ್ನುವುದನ್ನು ತಿಳಿಯಬೇಕಾಗಿದೆ. ಜಗತ್ತಿನ ಇತಿಹಾಸದಲ್ಲಿಯೇ ಒಬ್ಬ ಪ್ರಧಾನಿಯನ್ನು ಅವರ ಅಂಗರಕ್ಷಕನೇ ಕೊಂದು ಸತ್ತದ್ದು ನನಗೆ ತಿಳಿದ ಹಾಗೆ ಬೇರೆ ಉದಾಹರಣೆ ಇಲ್ಲ. ಇದು ಹೇಗೆ ಸಾಧ್ಯವಾಯಿತು ಎನ್ನುವುದರ ಕಡೆಗೆ ಯೋಚನೆ ಮಾಡಿ ನೋಡಿದರೆ ಈ ದೇಶ ಅನುಸರಿಸಿದಂತಹ ನೀತಿ, ಶ್ರೀಮತಿ ಇಂದಿರಾಗಾಂಧಿಯವರು ಕೈಗೊಂಡ ವಿದೇಶಾಂಗ ನೀತಿಯ ಬಗ್ಗೆ ಕೆಲವು ಧೋರಣೆಗಳು, ಸಾಮ್ರಾಜ್ಯವಾದಿ ಶಕ್ತಿಗಳಿಗೆ ಅದರಲ್ಲೂ ಸಾಮ್ರಾಜ್ಯಶಾಹಿವಾದಿ ಅಮೇರಿಕಾಕ್ಕೆ ಹಿಡಿಸಲಿಲ್ಲ. ಆರ್ಥಿಕ ಮಂಗ್ಗಟ್ಟಿನಿಂದ ಹೊರಗೆ ಬರಲು ಬಂಡವಾಳ ಶಾಹಿಗಳಿಗೆ ಸಾಧ್ಯವಾಗುತ್ತಿಲ್ಲ. ಆ ಕಾರಣದಿಂದ ಜಗತ್ತನ್ನು ತನ್ನ ಕೈಹಿಡಿತದಲ್ಲಿ ಇಟ್ಟುಕೊಳ್ಳಬೇಕೆನ್ನುವ ಯೋಚನೆ ಏನಿದೆ ಅವರ ಯೋಚನೆಗೆ ಭಾರತದೇಶ ಮಣಿಯಲಿಲ್ಲ. ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಸಿಲೋನ್ ತರಹ ಮಾಡಲಿಕ್ಕೆ ಹೊರಟು ನಮ್ಮ ಭಾರತ ದೇಶದಲ್ಲಿ ಹೊಸ ರೀತಿಯ ಪ್ರತ್ಯೇಕತಾವಾದಿ ಚಳುವಳಿಯನ್ನು, ವಿಚ್ಛಿದ್ರಕಾರಕ ಶಕ್ತಿಗಳನ್ನು ಸೃಷ್ಟಿ ಮಾಡುವುದಕ್ಕೆ ಪ್ರಯತ್ನಪಟ್ಟು ಭಾರತ ದೇಶದ ಏಕತೆ ಮತ್ತು ಸಮಗ್ರತೆಯನ್ನು ನಾಶ ಮಾಡಿದರೆ ಭಾರತದೇಶವನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳಲು ಸಾಮ್ರಾಜ್ಯ ಶಾಹಿಗಳು ಹಲವಾರು ವರ್ಷಗಳಿಂದ ಪ್ರಯತ್ನಪಟ್ಟು, ಭಾರತದ ಅಸ್ಸಾಂ, ಮಿಜೋರಾಂ, ನಾಗಾಲ್ಯಾಂಡ್ ಮತ್ತು ತ್ರಿಪುರ ರಾಜ್ಯಗಳಲ್ಲಿ ಮತ್ತು ಇತ್ತೀಚೆಗೆ ಪಂಜಾಬ್‌ನಲ್ಲಿ ಖಲಿಸ್ತಾನ ಚಳುವಳಿಗೆ ಪ್ರೋತ್ಸಾಹ ಕೊಟ್ಟು ಇಂತಹ ಕೆಲಸವನು ಮಾಡುತ್ತಿದ್ದಾರೆ. ಇದಕ್ಕಾಗಿಯೇ ಶ್ರೀಮತಿ ಇಂದಿರಾಗಾಂಧಿಯವರು ವಿಶ್ವಶಾಂತಿಯಿರಬೇಕು ಅಲಿಪ್ತ ನೀತಿಯಿಂದ ಜಗತ್ತಿನಲ್ಲಿ ನ್ಯೂ ಎಕಾನಮಿಂಕ್ ಆರ್ಡರ್ ಬರಬೇಕೆಂದು ಹೇಳುತ್ತಿದ್ದರು. ಜೊತೆಗೆ ನಮ್ಮ ಬೆಳವಣಿಗೆಗೆ ಮತ್ತು ಅಭಿವೃದ್ಧಿಗೆ ಕೆಲವೊಂದು ಶಕ್ತಿಗಳು ಅಡ್ಡಿಬರುತ್ತವೆಂದು ಶ್ರೀಮತಿ ಗಾಂಧಿಯವರೂ ಹೇಳುತ್ತಿದ್ದುದು ಅವರಿಗೆ ಹಿಡಿಸಲಿಲ್ಲ. ದುಷ್ಟ ಶಕ್ತಿಗಳು ಶ್ರೀಮತಿ ಇಂದಿರಾಗಾಂಧಿಯವರನ್ನು ಹೇಗಾದರೂ ಮಾಡಿ ತೆಗೆಯಬೇಕೆಂದು ಅವರ ಜೀವಕ್ಕೆ ಹಲ್ಲೆಯನ್ನುಂಟು ಮಾಡಬೇಕೆಂದು ಯೋಚನೆ ಮಾಡಿದ್ದರು. ಇದೇನೂ ಹೊಸದಲ್ಲ, ಹಿಂದೆ ಶ್ರೀಲಂಕಾದ ತಮಿಳೋಮನ್ ಬಂಡಾರ ನಾಯಕ ಭಾಂಗ್ಲಾದೇಶದ ಶೇಖ್‌ಮುಜಿಬುರ್ ರಹಮಾನ್ ಮತ್ತು ಫಿಲಿಫೈನ್ಸ್‌ನ ಅಕ್ವಿನೋ ಮುಂತಾದ ಉನ್ನತ ನಾಯಕರುಗಳನ್ನು ಕೊಲೆ ಮಾಡಲಾಯಿತು. ಸಿ. ಐ. ಎ. ನವರು ಯಾವರೀತಿ ಮಾಡಿದ್ದಾರು, ಈಗಲೂ ಕೂಡ ಅದೇ ರೀತಿ ಇಲ್ಲಿ ಮಾಡಿದ್ದಾರೆ. ಆ ಒಂದು ಹಿನ್ನೆಲೆಯಲ್ಲಿ ಹಿಂದೂಸ್ಥಾನದಲ್ಲಿ ಹಿಂದೂಗಳು ಮತ್ತು ಸಿಖ್ಖರು ಇವರ ಮಧ್ಯದಲ್ಲಿ ಭಿನ್ನಾಭಿಪ್ರಾಯವನ್ನು ತಂದು ೧೯೮೭ನೇ ಇಸವಿಯಲ್ಲಿ ಏನೊಂದು ಘಟನೆ ನಡೆಯಿತು, ಏನೊಂದು ರಕ್ತಪಾತವಾಯಿತು ಅದೇರೀತಿ ಮಾಡಬೇಕೆನ್ನುವ ಒಂದು ಯೋಜನೆಯನ್ನಿಟ್ಟು ಇದನ್ನು ಮಾಡಿದ್ದಾರೆ. ಶ್ರೀಮತಿ ಇಂದಿರಾಗಾಂಧಿಯವರ ನಿಧನದ ನಂತರ ದಹಲಿಯಲ್ಲಿ ಮತ್ತು ಇನ್ನಿತರ ನೂರಾರು ನಗರಗಳಲ್ಲಿ ನಡೆದಂತಹ ಘಟನೆಗಳನ್ನು ನೋಡಿದರೆ ನಮ್ಮ ಜವಾಬ್ದಾರಿ ಏನಿದೆ ಎಂಬುದನ್ನು ಆಳವಾಗಿ ಯೋಚನೆ ಮಾಡಬೇಕು. ಶ್ರೀಮತಿ ಇಂದಿರಾಗಾಂಧಿಯವರ ಕೊಲೆಯ ಬಗ್ಗೆ ಒಂದು ರಾಜಕೀಯ ಪಕ್ಷದವರಿಗೆ ಮಾತ್ರ ಆಘಾತವಾಗಿಲ್ಲ. ಶ್ರೀಮತಿ ಇಂದಿರಾಗಾಂಧಿಯವರ ಧೋರಣೆಗಳ ಬಗ್ಗೆ ಮಾನ್ಯ ವೀರಪ್ಪ ಮೊಯಿಲಿಯವರು ಹೇಳಿದರು ಶ್ರೀಮತಿ ಇಂದಿರಾಗಾಂಧಿಯವರ ಎಲ್ಲಾ ನೀತಿಗಳ ಬಗ್ಗೆ ನಮ್ಮ ವಿರೋಧವಿಲ್ಲ, ಕೆಲವೊಂದು ನೀತಿಗಳ ಬಗ್ಗೆ ನಮ್ಮ ಭಿನ್ನಾಭಿಪ್ರಾಯವಿದೆ. ವಿದೇಶಾಂಗ ನೀತಿ, ವಿಶ್ವಶಾಂತಿ ಮತ್ತು ಅಲಿಪ್ತ ನೀತಿಗಳಿಂದ ರಾಷ್ಟ್ರ ಬಲಿಷ್ಟವಾಗಬೇಕು, ಅದರಿಂದ ಹೆಚ್ಚು ಹೆಚ್ಚಾಗಿ ಅಭಿವೃದ್ಧಿಯಾಗಿ ದೇಶದ ಜನತೆಗೆ ಸಹಾಯವಾಗಬೇಕು ಎಂದು ಶ್ರೀಮತಿ ಇಂದಿರಾಗಾಂಧಿಯವರು ಹೇಳುತ್ತಿದ್ದರು. ಬ್ಯಾಂಕ್‌ಗಳಲ್ಲಿರತಕ್ಕ ಜನಸಾಮಾನ್ಯರ ಹಣ ದೇಶಕ್ಕಾಗಿ ವಿನಿಯೋಗವಾಗಬೇಕೆಂದು ಬ್ಯಾಂಕುಗಳ ರಾಷ್ಟ್ರೀಕರಣ ಮಾಡಿದರು, ಅದನ್ನು ನಾವು ಸ್ವಾಗತ ಮಾಡಿದ್ದೇವೆ. ಬಾಂಗ್ಲಾದೇಶದ ವಿಮೋಚನೆಗಾಗಿ ಸಹಾಯ ಮಾಡಿದರು ಅದಕ್ಕೆ ನಾವು ಬೆಂಬಲ ಕೊಟ್ಟಿದ್ದೇವೆ. ಅವರು ಕೆಲಸ ಮಾಡತಕ್ಕ ವೈಖರಿಗಳ ಬಗ್ಗೆ ಕೆಲವು ಭಿನ್ನಾಭಿಪ್ರಾಯಗಳು ಇರಬಹುದು. ಶ್ರೀಮತಿ ಗಾಂಧಿಯವರು ಯಾವಾಗಲೂ ಕೂಡ ಹೇಳುತ್ತಿದ್ದರು, ಸಾಮ್ರಾಜ್ಯವಾದಿಶಾಹಿಗಳು ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ಹಾಳು ಮಾಡಲು ಪ್ರಯತ್ನಮಾಡುತ್ತಿದ್ದಾರೆ ಎಂದು ಹೇಳುತ್ತಿದ್ದರು. ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ಕಾಪಾಡುವುದಕ್ಕೆ ಜಾತಿಶಕ್ತಿಗಳನ್ನು, ಕೋಮುವಾರು ಶಕ್ತಿಗಳನ್ನು ಬೆಳೆಯುವುದಕ್ಕೆ ಬಿಡಬಾರದು, ವಿಶ್ವಶಾಂತಿಯನ್ನು ಕಾಪಾಡಿಕೊಳ್ಳಬೇಕೆಂದು ಹೇಳುತ್ತಿದ್ದರು. ಆ ಕೆಲಸವನ್ನು ಮಾಡುವುದರ ಮುಖಾಂತರ ನಾವು ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಬೇಕಾಗಿದೆ. ದುಷ್ಟ ಶಕ್ತಿಗಳು

ದೇಶದಲ್ಲಿ ಬೆಳೆಯುವುದಕ್ಕೆ ಅವಕಾಶ ಕೊಡಬಾರದು, ಯಾವುದೇ ಭಿನ್ನಾಭಿಪ್ರಾಯಗಳಿದ್ದರೂ ಕೂಡ ದೇಶದ ಏಕ್ಯತೆ ಮತ್ತು ಸಮಗ್ರತೆಯನ್ನು ಕಾಪಾಡುವುದರ ಕಡೆಗೆ ಜನರ ಮನಸ್ಸನ್ನು ತಿರುಗಿಸ ಬೇಕೆಂದು ಹೇಳಿ, ನಾನು ಮತ್ತು ಸಿ. ಪಿ. ಐ. (ಎಂ) ವಕ್ಷದ ಪರವಾಗಿ ಮೃತರ ಆತ್ಮಕ್ಕೆ ಶ್ರದ್ಧಾಂಜಲಿಯನ್ನು ಕೋರುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.--(ರಾಜಾಜಿನಗರ).—

ಮಾನ್ಯ ಅಧ್ಯಕ್ಷರೆ, ಶ್ರೀಮತಿ ಇಂದಿರಾಗಾಂಧಿಯವರು ನಮ್ಮನ್ನ ಅಗಲಿ ಇಂದಿಗೆ ಸುಮಾರು ಒಂದು ತಿಂಗಳಾಗುತ್ತಾ ಬರುತ್ತಿದೆ. ಶ್ರೀಮತಿ ಇಂದಿರಾಗಾಂಧಿಯವರ ಹತ್ಯೆಯ ಬಗ್ಗೆ ರಾಷ್ಟ್ರದಲ್ಲೇ ಅಲ್ಲ, ವಿಶ್ವದ ಎಲ್ಲಾ ನಾಯಕರು ಸಹ ಅಪಾರವಾದ ಸಂತಾಪವನ್ನು ಸೂಚಿಸಿದ್ದಾರೆ. ಅದೇ ರೀತಿ ಅವರಿಗೆ ಗೌರವವನ್ನೂ ಸಹ ಸೂಚಿಸಿದ್ದಾರೆ. ಅವರ ಒಂದು ಅಗಲಿಕೆ ನಿಜಕ್ಕೂ ನಾಡಿಗೆ ಹಾಗೂ ರಾಷ್ಟ್ರಕ್ಕೆ ತಂಬಲಾರದ ನಷ್ಟವಾಗಿದೆ. ಎಂಬುದು ನನ್ನ ಅಭಿಪ್ರಾಯ. ಏಕೆಂದರೆ ಅವರ ಒಂದು ಧೀಮಂತ ನಾಯಕತ್ವ ನಮ್ಮ ರಾಷ್ಟ್ರದಲ್ಲೇ ಅಲ್ಲ ವಿಶ್ವದ ನಾಯಕತ್ವದಲ್ಲೇ ಅಗಲಿ ಮೆಚ್ಚುವಂತಾದ್ದು. ನನ್ನ ಮಿತ್ರರು ಹೇಳಿದ ಹಾಗೆ, ಅವರ ಬಗ್ಗೆ ನಮ್ಮ ಪಕ್ಷ ಅತಿ ಮುಖ್ಯವಾಗಿ ಅಪೇಕ್ಷೆ ಪಟ್ಟಿರುವುದೇ ನೆಂದರೆ ವಿಶ್ವದಲ್ಲಿರುವ ಸಾಮ್ರಾಜ್ಯಶಾಹಿಗಳನ್ನು ಎದುರಿಸಬೇಕು, ಹಾಗೂ ಸಮಾನತೆಯನ್ನು ತರ ಬೇಕೆನ್ನುವ ವಾದ ಏನಿದೆ, ಆ ವಾದಕ್ಕೆ ಬೆಲೆಕೊಟ್ಟಂತಹ ಹಾಗೂ ಅದಕ್ಕೆ ಪುಷ್ಟಿ ಕೊಟ್ಟಂತಹ ಒಬ್ಬ ಧೀಮಂತ ವ್ಯಕ್ತಿ, ಶ್ರೀಮತಿ ಇಂದಿರಾಗಾಂಧಿಯವರು ಅವರು ವಿಶ್ವದಲ್ಲಿ ಸಾಮ್ರಾಜ್ಯಶಾಹಿಗಳ ವಿರುದ್ಧವಾಗಿ ಬಹಳವಾಗಿ ಹೋರಾಡಿದಂತಹ ನಾಯಕರು. ಏಯಾಟ್ನಾಂ ಇರಬಹುದು, ಅಥವಾ ಬಂಗ್ಲಾದೇಶ್ ಇರ ಬಹುದು, ಅಲ್ಲಿದ್ದಂತಹ ಸ್ವಾತಂತ್ರ್ಯದ ಹರಣವಾಗುತ್ತಿದ್ದಾಗ ಅದರ ವಿರುದ್ಧ ಪ್ರಬಲವಾಗಿ ಹೋರಾಟ ಮಾಡಿ, ಅಲ್ಲಿಯ ಜನಗಳಿಗೆ ಸ್ವಾತಂತ್ರ್ಯವನ್ನು ಗಳಿಸಿಕೊಟ್ಟ, ಜನಗಳಿಗೆ ಬೆಂಬಲವನ್ನು ಕೊಟ್ಟಂತಹ ಒಬ್ಬ ನಾಯಕಿ. ಅವರ ಧೀಮಂತ ನಾಯಕತ್ವದಲ್ಲಿ ಒಂದು ವಿಶೇಷವಾದುದು ಏನೆಂದರೆ, ವಿಶ್ವದಲ್ಲಿ ಅವತ್ತಿನ ದಿವಸದಿಂದ ಅಣು ಶಸ್ತ್ರಗಳನ್ನು ತಯಾರು ಮಾಡಬಾರದು, ಎಲ್ಲರೂ ನಿಶ್ಶಸ್ತ್ರೀಕರಣ ಪಾಲನೆ ಮಾಡಬೇಕು ಎಂಬುದಾಗಿ ಸತತವಾಗಿ ಅವರು ಹೇಳುತ್ತಿದ್ದರು. ಮತ್ತು ಅದಕ್ಕಾಗಿ ಶ್ರಮಿಸು ತ್ತಿದ್ದಂತಹವರು. ಹೀಗೆ ಹಲವಾರು ಗುಣಗಳನ್ನು ನಾವು ಅವರಲ್ಲಿ ಕಾಣುತ್ತಿದ್ದೆವು. ಪಂಡಿತ್ ಜವಹರಲಾಲ್ ನೆಹರೂರವರೂ ಕೂಡ ಹುಟ್ಟು ಹೋರಾಟಗಾರರಾಗಿರಲಿಲ್ಲ. ಆ ಸಂದರ್ಭದಲ್ಲಿ ಹೆಚ್ಚಿನ ಪೆಚ್ಚು ಪ್ರಭಾವಶಾಲಿಯಾಗಿ ಸಾಮ್ರಾಜ್ಯಶಾಹಿಗಳು ಒತ್ತಡ ತರುತ್ತಿದ್ದರು. ಆ ಒತ್ತಡಕ್ಕೆ ಮಣಿಯದೆ ಮುಂದೆ ಹೋಗುವಂತಹದ್ದು ಅಷ್ಟೇನೂ ಸುಲಭವಲ್ಲ. ಆದರೆ ಅದನ್ನು ಮಾಡುವುದಕ್ಕೆ ಸರಿಯಾದ ಬುದ್ಧಿ ಬೇಕು ಚಾಕಚಕ್ಯತೆ ಬೇಕು, ಹಾಗೂ ಧೈರ್ಯ ಬೇಕು. ಮತ್ತೆ ಸಮಗ್ರವಾದ ಅಂತರರಾಷ್ಟ್ರೀಯ ತಿಳುವಳಿಕೆ ಕೂಡ ಬೇಕಾಗಿತ್ತು. ಆ ತರಹ ಎಲ್ಲ ತಿಳುವಳಿಕೆಯನ್ನು ಶ್ರೀಮತಿ ಇಂದಿರಾಗಾಂಧಿಯವರು ಪಡೆದಿದ್ದರು. ನಮ್ಮ ರಾಷ್ಟ್ರದ ವಿದೇಶಾಂಗ ನೀತಿಯ ಬಗ್ಗೆ ಸರಿಯಾದ ದಾರಿಯಲ್ಲಿ ಅವರು ಹೋಗುತ್ತಿದ್ದರು ಎಂಬುದು ನಮ್ಮ ಸ್ಪಷ್ಟವಾದ ಅಭಿಪ್ರಾಯ. ಅದೇ ಸಮಯಕ್ಕೆ ನಮ್ಮಲ್ಲಿ ಆಂತರರಾಜ್ಯ ಪ್ರಶ್ನೆ ಉಲ್ಬಣಗೊಂಡಿದ್ದನ್ನು ನಾವು ಮರೆಯುವ ಹಾಗೆ ಇಲ್ಲ. ಅದು ತೀವ್ರ ವಾಗಿ ಉಲ್ಬಣಗೊಂಡಿತ್ತು. ಆವಾಗ ಅವರು ತೆಗೆದುಕೊಂಡಂತಹ ಕ್ರಮವನ್ನು ನಾವು ನಿಜವಾಗಿಯೂ ಹೇಳಲೇಬೇಕಾಗುತ್ತದೆ. ಆ ದಿಸೆಯಲ್ಲಿ ಅವರು ಕೈಗೊಂಡಂತಹ ಕಾರ್ಯದಕ್ಷತೆ ನಿಜವಾಗಿಯೂ ಮೆಚ್ಚ ಬೇಕಾದುದು. ಅವರ ಒಂದು ಧೈರ್ಯ, ಸ್ಥೈರ್ಯ ಮೆಚ್ಚುವಂತಹದ್ದು. ಯಾವುದೇ ಕಷ್ಟದ ಪರಿಸ್ಥಿತಿ ಬಂದರೂ ಸಹ ನನಗೆ ತಿಳಿದ ಮಟ್ಟಿಗೆ, ಅವರು ಮಾಡಿದಂತಹ ಬೇರೆ ರೀತಿಯ ಕಾರ್ಯಗಳಲ್ಲಿ ನಮ್ಮ ಕೆಲವು ಭಿನ್ನಾಭಿಪ್ರಾಯ ಇರಬಹುದು. ಆದರೆ ಅವರು ಬಂದಂತಹ ಸಮಸ್ಯೆಯನ್ನು ಧೈರ್ಯವಾಗಿ ಎದುರಿಸುತ್ತಿದ್ದರು ಎಂಬುದನ್ನು ನಾವು ಯಾರೂ ಮರೆಯುವ ಹಾಗೆ ಇಲ್ಲ. ಉದಾಹರಣೆಗಾಗಿ ಹೇಳಿ ವುದಾದರೆ, ಇತ್ತೀಚೆಗೆ ನಡೆದ ಪಂಜಾಬ್‌ನ ಘಟನೆಯನ್ನು ನೋಡಿದರೆ, ಆ ಒಂದು ಸಮಸ್ಯೆಯನ್ನು ರಾಜಕೀಯವಾಗಿ ಚರ್ಚೆ ಮಾಡಿ ಇತ್ಯರ್ಥ ಮಾಡಬಹುದಿತ್ತು. ಎಂಬುದು ನಮ್ಮ ಅಭಿಪ್ರಾಯ ಪಂಜಾಬಿನಲ್ಲಿ ಉಲ್ಬಣವಾಯಿತು. ಆದು ಅತಿರೇಕದಲ್ಲಿ ಬೆಳೆಯಿತು. ಭಯೋತ್ಪಾದಕರ ಶಕ್ತಿ ಬೃಹದಾಕಾರವಾಗಿ ಬೆಳೆದು ಅನೇಕ ಕಡೆ ಕಂಡ ಕಂಡ ಕಡೆ ಜನಗಳನ್ನು ಕೊಂದು ಹಾಕಿದರು. ಬಿಂದ್ರನ್ ವಾಲೆಯವರ ಅತಿರೇಕ ಜಾಸ್ತಿಯಾದ ಮೇಲೆ ಅವನ್ನು ಹತ್ತಿಕ್ಕಲು ಸೈನ್ಯವನ್ನು ಅಲ್ಲಿಗೆ ಕಳುಹಿಸ ಬೇಕಾಯಿತು ಅಲ್ಲಿಗೆ ಸೈನ್ಯವನ್ನು ಕಳುಹಿಸಬೇಕು ಎಂಬುದನ್ನು ತೀರ್ಮಾನ ಮಾಡಬೇಕಾದರೂ ಒಂದು ದಿಟ್ಟತನ ಬೇಕು. ಆ ಸಂದರ್ಭದಲ್ಲಿ ಅಂತಹ ಒಂದು ದಿಟ್ಟತನದ ತೀರ್ಮಾನವನ್ನು ತೆಗೆದು

ಕೊಂಡರು ಎಂಬುದು ನನ್ನ ಸ್ಪಷ್ಟವಾದ ಅಭಿಪ್ರಾಯ. ಆ ಪ್ರಶ್ನೆ ಇವ್ಗೂ ಇತ್ಯರ್ಥವಾಗಿಲ್ಲ ನಿಜ. ಪರಿಸ್ಥಿತಿ ಇನ್ನೂ ಕ್ಲಿಷ್ಟವಾಗಿದೆ. ಆದರೆ ಅವರ ಒಂದು ಧೈರ್ಯಕ್ಕೆ ಮಾತ್ರ ಮೆಚ್ಚಬೇಕಾಗುತ್ತದೆ. ಅದೇ ರೀತಿಯ ಧೈರ್ಯವನ್ನು ಬಾಂಗ್ಲಾದೇಶದ ವಿಮೋಚನೆಯ ಸಂದರ್ಭದಲ್ಲೂ ಕೈಗೊಂಡಿದ್ದರು. ಇಂತಹ ಹಲವಾರು ನಿದರ್ಶನಗಳನ್ನು ನಾವು ನೋಡಬಹುದು. ಎರಡನೆಯದಾಗಿ ಅವರಲ್ಲಿದ್ದಂತಹ ಅತಿ ಮುಖ್ಯವಾದ ಗುಣ ಮತ್ತೊಂದು ಏನು ಇತ್ತು ಎಂದರೆ, ಅದರಲ್ಲೂ ಒಬ್ಬ ನಾಯಕಿಯಾಗಿ, ಹಾಗು ರಾಷ್ಟ್ರದ ನಾಯಕಿಯಾಗಿ. ಪ್ರಧಾನ ಮಂತ್ರಿಯಾಗಿ ಇರಬೇಕಾದ ಆ ಒಂದು ಗುಣವನ್ನು ನಾವು ಶ್ರೀಮತಿ ಇಂದಿರಾಗಾಂಧಿಯರಲ್ಲಿ ಕಂಡಿದ್ದೇವೆ. ಇನ್ನೊಂದು ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕು ಎಂದರೆ, ಅಂತಹ ಒಂದು ದಿಟ್ಟತನದ ನಾಯಕಿಯಾಗಿದ್ದಂತಹ ಶ್ರೀಮತಿ ಇಂದಿರಾಗಾಂಧಿಯವರನ್ನು ಅವರ ಅಂಗರಕ್ಷಕರೇ ಕೊಲೆಗೈದರು ಎಂದರೆ, ಅಂಗರಕ್ಷಕರಲ್ಲಿ ಎಷ್ಟೊಂದು ವೈಫಲ್ಯತೆ ಇದೆ, ಸರ್ಕಾರಿ ಯಂತ್ರವಾಗಿರತಕ್ಕಂತಹ ಅಂಗರಕ್ಷಕರನ್ನು ನಿಯೋಜಿಸುವ ಇಲಾಖೆಯಲ್ಲಿ ಎಷ್ಟೊಂದು ವೈಫಲ್ಯತೆ ಇದೆ ಎಂಬುದನ್ನು ಎತ್ತಿ ತೋರಿಸುತ್ತಿದೆ ಎಂಬುದೂ ನನ್ನ ಸ್ಪಷ್ಟವಾದ ಅಭಿಪ್ರಾಯ. ನಿಜವಾಗಿಯೂ ದುಷ್ಟ ಶಕ್ತಿಗಳು ಇದರ ಹಿಂದೆ ಇದ್ದಾವೆ ಎಂಬುದನ್ನು ಒಪ್ಪಿಕೊಳ್ಳಲೇ ಬೇಕಾಗುತ್ತದೆ. ಈ ಒಂದೂ ದುಷ್ಟ ಶಕ್ತಿಗಳು ನಮ್ಮ ಈ ಒಂದು ಬೃಹತ್ ರಾಷ್ಟ್ರವನ್ನು ಛಿದ್ರ ಮಾಡಬೇಕು, ಇದರ ಜೊತೆಯಲ್ಲೇ ತಮ್ಮ ಹಿತವನ್ನು ಸಾಧಿಸಿಕೊಳ್ಳಬೇಕು ಎನ್ನುವ ಎರಡೂ ಮೂರು ಶಕ್ತಿಗಳು ಇವತ್ತು ತಲೆ ಎತ್ತುತ್ತಿವೆ ಎಂಬುದನ್ನು ನಾವು ಗಮನಿಸಬಹುದು. ಆದರಲ್ಲಿ ಒಂದರೆಡನ್ನು ಉಚ್ಚಾರಣೆ ಮಾಡುವುದಾದರೆ, ಸಾಮ್ರಾಜ್ಯಶಾಹಿ ಶಕ್ತಿ, ಹಾಗೂ ಅಮೇರಿಕನ್ ಸಾಮ್ರಾಜ್ಯ ಶಾಹಿ ಶಕ್ತಿಗಳು ಇದರ ಹಿಂದೆ ಇದ್ದಾವೆ ಎಂಬುದು ನನ್ನ ಸ್ಪಷ್ಟವಾದ ಅಭಿಪ್ರಾಯ. ಇದರ ಬಗ್ಗೆ ವಿಚಾರಣೆಯನ್ನು ಮಾಡಲು ಸುಪ್ರೀಂ ಕೋರ್ಟಿನ ಒಬ್ಬ ನ್ಯಾಯಾಧೀಶರ ನೇತೃತ್ವದಲ್ಲಿ ಒಂದು ಕಮಿಷನ್ ಅನ್ನೂ ಕೂಡ ಕೇಂದ್ರ ಸರ್ಕಾರ ನೇಮಕ ಮಾಡಿದೆ. ಆ ಒಂದು ಕಮಿಷನ್ ಈ ಹಿಂದೆ ಹೇಳಿದ ಎಲ್ಲಾ ವಿಚಾರಗಳನ್ನು ಹೊರಗೆ ಎಳೆಯಬಂತ್ತದೆ ಎಂಬುದನ್ನು ನಾವಂತೂ ಹೇಳುವ ಹಾಗೆ ಇಲ್ಲ. ಈ ಒಂದು ದುಷ್ಟ ಶಕ್ತಿಗಳು ವಿದೇಶದಲ್ಲಿದ್ದಾವೆ ಎಂಬುದು ಇದರಿಂದ ಸ್ಪಷ್ಟವಾಗಿ ಗೊತ್ತಾಗಿದೆ. ಇದರ ಹಿಂದೆ ಸಾಮ್ರಾಜ್ಯಶಾಹಿಗಳ ಕೈವಾಡ ಇದೆ. ನಮ್ಮ ದೇಶವನ್ನು ಛಿದ್ರ ಮಾಡುವ ಒಂದೇ ಒಂದು ಅವರ ಉದ್ದೇಶ ಇದ್ದು ಅಂತಹವರೇ ಈ ಒಂದು ಹೀನ ಕೃತ್ಯವನ್ನು ಮಾಡಿದ್ದಾರೆಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಇದರ ಜೊತೆಯಲ್ಲಿ ಸೆಕ್ಯೂರಿಟಿಯ ವೈಫಲ್ಯತೆ ಕೂಡ ಕಂಡು ಬರುತ್ತಿದೆ. ಆದರೆ ನಮಗಿಂತ ಚಿಕ್ಕ ಚಿಕ್ಕ ರಾಷ್ಟ್ರಗಳಲ್ಲಿ ಸೆಕ್ಯೂರಿಟಿಯನ್ನು ಹೇಗೆ ನಡೆಸಿಕೊಂಡು ಬರುತ್ತಿದ್ದಾರೆ ಎಂಬುದನ್ನು ನೋಡಬಹುದು. ಒಂದೇ ಒಂದು ಉದಾಹರಣೆಯನ್ನು ಹೇಳುವುದಾದರೆ, ಕ್ಯೂಬಾದ ಅಧ್ಯಕ್ಷರಾದ ಶ್ರೀಮಾನ್ ಫಿಡಲ್ ಕ್ಯಾಸ್ಟ್ರೋ ಅವರಿಗೆ ಒಂದು ಚಟ ಇತ್ತು ಅದೇನೆಂದರೆ ಚುಟ್ಟಾ ಸೇದುವುದು. ಅವರು ಒಂದು ದಿವಸ ಸಭೆಯೊಂದರಲ್ಲಿ ಭಾಷಣವನ್ನು ಮುಗಿಸಿ ಕುರ್ಚಿತು ಕೊಂಡಾಗ ಚುಟ್ಟವನ್ನು ಯಾರೋ ಒಬ್ಬರು ತಂದು ಕೊಟ್ಟರು. ಅವರು ಇನ್ನೇನು ಆ ಚುಟ್ಟವನ್ನು ಬಾಯಿಗೆ ಇಟ್ಟುಕೊಂಡು ಹಚ್ಚಿಕೊಳ್ಳಬೇಕು ಎನ್ನುವಷ್ಟರಲ್ಲಿ ಅವರ ಅಂಗರಕ್ಷಕರೊಬ್ಬರು ಆ ಚುಟ್ಟವನ್ನು ತೆಗೆದು ಬಿಸಾಕಿದ. ಅವಾಗ ಆ ಚುಟ್ಟ ಸ್ಫೋಟವಾಯಿತು ಅವರ ಜೀವ ಉಳಿಯಿತು. ಆದರೆ ಅತಿ ದೊಡ್ಡ ಕ್ರಾಂತಿಕಾರಕವಾದ ನಮ್ಮ ರಾಷ್ಟ್ರದಲ್ಲಿ ಅಂತಹ ಒಂದು ಕೆಲಸವನ್ನು ನಮ್ಮ ಅಂಗರಕ್ಷಕರು ಮಾಡದೆ, ಅವರ ಅಂಗರಕ್ಷಕರೆ ಈ ಒಂದು ಹೀನ ಕೃತ್ಯವನ್ನು ಮಾಡಿದ್ದಾರೆ ಅವರ ಈ ಒಂದು ಧೈರ್ಯಕ್ಕೆ ಅಂತರ ರಾಷ್ಟ್ರೀಯ ಶಕ್ತಿಗಳೂ ಸಹಾಯಕವಾಗಿದೆ ಎಂಬುದು ನನ್ನ ಸ್ಪಷ್ಟವಾದ ಅಭಿಪ್ರಾಯ. ಇದರ ಹಿನ್ನೆಲೆಯಲ್ಲಿ ಕಂಡು ಹಿಡಿಯಬೇಕಾದ ಜವಾಬ್ದಾರಿ ಇಂದು ಇದ್ದು ಅದನ್ನು ನಾವು ಮುಂದೆ ನೋಡಬಹುದು ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಜಾತ್ಯಾತೀತ ಎಂದು ನಾವು ಮಾತನಾಡಿದರೂ ಕಾರ್ಯ ಮಾತ್ರ ಜಾತಿಯ ಆಧಾರದ ಮೇಲೆಯೇ. ಆದರೆ ಶ್ರೀಮತಿ ಇಂದಿರಾಗಾಂಧಿಯವರು ಸರ್ವಧರ್ಮ ಸಮನ್ವಯತೆ ಎನ್ನುವ ರೀತಿಯಲ್ಲಿ ಮಾತನಾಡುತ್ತಿದ್ದರು. ಹಾಗೂ ಅದರಲ್ಲಿ ನಂಬಿಕೆಯನ್ನು ಇಟ್ಟಿದ್ದರು ಸರ್ವಧರ್ಮ ಸಮನ್ವಯತೆಯ ಜೊತೆಯಲ್ಲಿ ರಾಜ್ಯಗಳೊಡನೆ ಸಮಧುರ ಸಂಬಂಧ ಇರಬೇಕು. ಇಂದು ಅವರಿಗೆ ಭಾಷಣದ ಮೂಲಕ ಶ್ರದ್ಧಾಂಜಲಿಯನ್ನು ಅರ್ಪಿಸುವುದಕ್ಕೆ ಬದಲು ಅವರು ಏನು ಕೆಲವೊಂದು ಒಳ್ಳೆಯ ನೀತಿಯನ್ನು ಹಾಕಿ ಕೊಟ್ಟಿದ್ದಾರೆ. ಅವುಗಳಲ್ಲಿ ಮುಖ್ಯವಾದವುಗಳು ಯಾವುವೆಂದರೆ, ರಾಷ್ಟ್ರದ ಐಕ್ಯತೆ ಮತ್ತು ಸಮಗ್ರತೆಗಾಗಿ ನಾವು ಪಕ್ಷ ಭೇದವನ್ನು ಬಿಟ್ಟು ದುಡಿಯಬೇಕಾದುದು ನಮ್ಮೆಲ್ಲರ ಕರ್ತವ್ಯ. ಆ ಒಂದು ಕರ್ತವ್ಯವನ್ನು ನಾವು ಮಾಡಬೇಕಾದುದು ಅತಿ ಮುಖ್ಯವೆಂದು ನಾನಾದರೂ ತಿಳಿದುಕೊಂಡಿದ್ದೇನೆ. ಜಾತೀಯತೆ

ಹಾಗೂ ಕೋಮುವಾರು ಶಕ್ತಿಗಳು ಹಾಗೂ ದುಷ್ಟ ಶಕ್ತಿಗಳು ಈ ರಾಷ್ಟ್ರದಲ್ಲಿ ತಲೆಎತ್ತಿ ಮೆರೆಯುವುದಕ್ಕೆ ಪ್ರಯತ್ನ ಪಡುತ್ತಿವೆ ಅಂತಹ ಶಕ್ತಿಗಳನ್ನು ತಡೆಗಟ್ಟುವ ಜವಾಬ್ದಾರಿ ನಮ್ಮೆಲ್ಲರ ಮೇಲೆ ಇದೆ. ಅದಕ್ಕಾಗಿ ನಾವು ಶ್ರಮಿಸಿದ್ದೇ ಆದರೆ, ಅದೇ ಅವರಿಗೆ ಶ್ರದ್ಧಾಂಜಲಿ. ಅದಕ್ಕಿಂತ ದೊಡ್ಡ ಶ್ರದ್ಧಾಂಜಲಿ ಮತ್ತೊಂದು ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಅದೇ ನಾವು ಅವರಿಗೆ ಕೊಡುವಂತಹ ಗೌರವವೆಂದು ಸಹ ನಾನು ತಿಳಿದುಕೊಂಡಿದ್ದೇನೆ.

ಇನ್ನೊಂದು ಮಾತನ್ನು ಅವರ ಬಗ್ಗೆ ಹೇಳಬೇಕು ಎಂದರೆ, ಶ್ರೀಮತಿ ಇಂದಿರಾಗಾಂಧಿಯವರ ಜೊತೆ ನಮಗೆ ಅಷ್ಟೊಂದು ಹೆಚ್ಚಿನ ಸಂಪರ್ಕ ಇರಲಿಲ್ಲ. ಆದರೆ ಅವರನ್ನು ಕೇವಲ ೨–೩ ಬಾರಿ ಕಂಡಿದ್ದೇನೆ. ಮೊದಲನೆಯದಾಗಿ ನಮ್ಮ ರಾಜ್ಯದ ಶಾಸಕರ ಒಂದು ಟೀಮು ಹಿಂದೆ ಅವರನ್ನು ಗಡಿ ವಿಚಾರದಲ್ಲಿ ಭೇಟಿಯಾಗಿದ್ದಾಗ ನಾನು ಅವರನ್ನು ಕಂಡಿದ್ದೇನೆ. ಮತ್ತೊಂದು ಸಾರಿ ಎಂದರೆ ಈ ಹಿಂದೆ ಸಾರ್ವಜನಿಕ ಉದ್ದಿಮೆಗಳಲ್ಲಿರುವ ನೌಕರರು ಮುಷ್ಕರ ಹೂಡಿದ್ದಾಗ, ಆ ಒಂದು ವಿಚಾರದಲ್ಲಿ ನಾನು ಅವರನ್ನು ಕಂಡಿದ್ದೇನೆ. ಆ ಒಂದು ಸಮಯದಲ್ಲಿ ನಾನು ಅವರಲ್ಲಿ ಮುಖ್ಯವಾಗಿ ಕಂಡದ್ದೇನೆಂದರೆ, ಅವರು ಹೆಚ್ಚಾಗಿ ಮಾತನಾಡುತ್ತಿರಲಿಲ್ಲ. ಬರೀ ಕೇಳುತ್ತಿದ್ದರು. ನಾವು ಮಾತನಾಡಿದ ಮೇಲೆ ಕೊನೆಗೆ ಅವರು ಮುಗುಳ್ನಗೆಯಿಂದ ನಕ್ಕು ಬಿಟ್ಟರು ಮತ್ತೆ ಆ ಬಗ್ಗೆ ಅವರು ಏನೂ ಹೇಳಲಿಲ್ಲ. ನಾವೂ ಕೂಡ ಮತ್ತೆ ಅವರನ್ನು ಏನನ್ನೂ ಕೇಳಲಿಲ್ಲ. ಇದು ಏನು ತೋರಿಸುತ್ತದೆ ಎಂದರೆ SIR WANTON ಒಂದು ಮಾತನ್ನು ಹೇಳಿದ್ದಾರೆ.—"Speak low of the tongue but quick of an eny" ಅನುಭವಿ–ಶಾಲಿಗಳು ಆ ರೀತಿ ನಡೆದುಕೊಳ್ಳುತ್ತಾರೆಂದು ತತ್ವಜ್ಞಾನಿ ಹೇಳಿದ್ದಾರೆ. ಅದನ್ನು ಮಾಡುತ್ತಿದ್ದವರು ಶ್ರೀಮತಿ ಇಂದಿರಾ ಗಾಂಧಿಯವರೆಂದು ಕಾಣುತ್ತದೆ. ಯಾವುದನ್ನೆ ಮಾಡಬೇಕಾದರೂ ಅವರು ಧೈರ್ಯದಿಂದ ಮಾಡುತ್ತಿದ್ದರು. ಆ ಒಂದು ಆಧಾರದ ಮೇಲೆಯೇ ಅವರು ತೀರ್ಮಾನ ಮಾಡುತ್ತಿದ್ದರು ಎಂದು ಕಾಣುತ್ತದೆ. ಅದರಲ್ಲಿ ಕೆಲವು ತಪ್ಪಿರಬಹುದು. ಆದರೆ ಅವರ ಧೈರ್ಯವನ್ನು ಮಾತ್ರ ಮೆಚ್ಚಬೇಕು. ಇಂತಹ ಒಬ್ಬ ವ್ಯಕ್ತಿಯನ್ನು ಕಳೆದುಕೊಂಡು ನಿಜವಾಗಿಯೂ ಭಾರತ ದೇಶಕ್ಕೇ ತುಂಬಲಾರದ ನಷ್ಟವಾಗಿದೆ. ನಮ್ಮ ಮಿತ್ರರು ಮೊದಲೇ ಹೇಳಿದ ಹಾಗೆ ಭಾರತದ ಜನ ನಾವೆಲ್ಲರೂ ಸೇರಿ ಅವರು ಬಿಟ್ಟಂತಹ ಕೆಲವು ಒಳ್ಳೆಯ ಮಾರ್ಗದರ್ಶನವನ್ನು ಹಾಗೂ ಕೆಲವು ಒಳ್ಳೆಯ ನೀತಿಗಳನ್ನು ಅಂತರ ರಾಷ್ಟ್ರೀಯ ನೀತಿಯನ್ನು ಪಾಲಿಸಿಕೊಂಡು ದೇಶದ ಸಮಗ್ರತೆ ಹಾಗೂ ದೇಶದ ಐಕ್ಯತೆಗಾಗಿ ದುಡಿಯುವಂತಹ ಕೆಲಸವನ್ನು ಇಂದು ನಾವೆಲ್ಲರೂ ಮಾಡಬೇಕಾಗಿದೆ. ಇದರಲ್ಲಿ ರಾಜಕೀಯ ಪ್ರಶ್ನೆ ಇಲ್ಲ ಇದನ್ನು ಎಲ್ಲರೂ ಸೇರಿ ಮಾಡಬೇಕಾಗಿದೆ. ಆ ಕೆಲಸವನ್ನು ನಾವೆಲ್ಲರೂ ಸೇರಿ ಮಾಡೋಣ ಎಂಬ ಮಾತನ್ನು ಹೇಳುತ್ತಾ, ಮಾನ್ಯ ಮುಖ್ಯ ಮಂತ್ರಿಗಳು ತಂದಂತಹ ನಿರ್ಣಯಕ್ಕೆ ನನ್ನ ಬೆಂಬಲವನ್ನು ಸೂಚಿಸುತ್ತಾ, ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ.

ಶ್ರೀ ಬಿ.ಜಿ. ಬಣಕಾರ್ (ಹಿರೇಕೆರೂರು) —ಸನ್ಮಾನ್ಯ ಅಧ್ಯಕ್ಷರೆ, ಅಕ್ಟೋಬರ್ ೩೧ ಅಂದರೆ ಇಡೀ ಭಾರತದ ಇತಿಹಾಸ ಅಷ್ಟೇ ಅಲ್ಲ, ಜಗತ್ತಿನ ಇತಿಹಾಸದಲ್ಲೇ ಕ್ರೂರತನದ ದಿವಸ ; ಮತ್ತು ಒಂದು ಕರಾಳ ದಿವಸ. ಆ ದಿವಸ, ನಮ್ಮ ದೇಶದ ನೆಚ್ಚಿನ ಪ್ರಧಾನಿಯಾಗಿ ೧೬ ವರ್ಷಗಳ ಕಾಲ ದೇಶಸೇವೆ ಮಾಡಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಮಾಡಿ ಬಡವರ ಶ್ರೀಮಂತರ ನಡುವೆ ಇದ್ದ ಅಂತರವನ್ನು, ಆಳವನ್ನು ಒಂದೆಡೆ ತರಲಿಕ್ಕೆ ಪ್ರಯತ್ನ ಮಾಡಿದ ಶ್ರೀಮತಿ ಇಂದಿರಾಗಾಂಧಿಯವರು ಅಸು ನೀಗಿದರು. ಆ ಒಂದು ಹತ್ಯೆ ಏನಿಗೆ ಅದು ಅತೀ ಖಂಡನೀಯವಾದುದು. ಈ ರೀತಿ ಹಿಂದೆ ಭಾರತ ದೇಶದಲ್ಲಿ ಎಂದೂ ನಡೆದಿರಲಿಲ್ಲ. ಇಂಥ ಒಂದು ಕ್ರೂರ ಹಾಗೂ ಪಾಶವೀ ಕೃತ್ಯ ಮುಂದೆ ನಮ್ಮ ದೇಶದಲ್ಲಿ ಆಗದಂತೆ ನೋಡಿಕೊಳ್ಳತಕ್ಕದ್ದು ರಾಜ್ಯ ಸರ್ಕಾರಗಳ ಮತ್ತು ಕೇಂದ್ರ ಸರ್ಕಾರದ ಕೆಲಸ ಆಗಬೇಕು. ಶ್ರೀಮತಿ ಇಂದಿರಾಗಾಂಧಿಯವರು ನಮ್ಮ ದೇಶದ ಒಂದು ದಾರಿದೀವಿಗೆ ಇದ್ದ ಹಾಗೆ ಇದ್ದರು ; ಮತ್ತು ಒಂದು ಆದಿಶಕ್ತಿಯಾಗಿದ್ದರು. ಅವರು ಒಂದು ವ್ಯಕ್ತಿ ಅಲ್ಲ ಒಂದು ಶಕ್ತಿಯಾಗಿದ್ದರು. ಅವರು ನೆಹರೂರವರ ಜೊತೆಯಲ್ಲಿ ಹಾಗೂ ಮಹಾತ್ಮ ಗಾಂಧಿಯವರ ಆಶ್ರಯದಲ್ಲಿ ದೇಶದ ಸ್ವಾತಂತ್ರ್ಯದ ಸಲುವಾಗಿ ಹೋರಾಡಿದಂತಹ ಮಹಾನ್ ವ್ಯಕ್ತಿ. ನಂತರ ರಾಜಕೀಯದಲ್ಲಿ ಪ್ರವೇಶಿಸಿ, ಲೋಕಸಭೆಯ ಸದಸ್ಯರಾಗಿ, ಪ್ರಧಾನ ಮಂತ್ರಿಗಳಾಗಿ ಅವರು ಮಾಡಿದಂತಹ ಸೇವೆ, ಅವರು ದೇಶದ ಅಭಿವೃದ್ಧಿಗೋಸ್ಕರ, ಬಡವರ ಕಲ್ಯಾಣಕ್ಕಾಗಿ ಹಿಂದುಳಿದ ಸಮಾಜದವರ, ಹಿಂದುಳಿದ ಪಂಗಡದವರ ಸಲುವಾಗಿ ನುತ್ತು ಅವರ ಅಭಿವೃದ್ಧಿಗಾಗಿ ಹಾಕಿಕೊಂಡ ೨೦ ಅಂಶಗಳ ಕಾರ್ಯಕ್ರಮಗಳನ್ನು ನೋಡಿದರೆ ಇಡೀ ಭಾರತ ದೇಶ ಅಷ್ಟೇ ಅಲ್ಲ, ಜಗತ್ತಿನ ಯಾವ ದೇಶದಲ್ಲೂ ಹಾಕಿಕೊಳ್ಳದಂತಹ ಕಾರ್ಯ

ಕ್ರಮಗಳನ್ನು ಈ ದೇಶದ ಅಭಿವೃದ್ಧಿಗೋಸ್ಕರ ಹಾಕಿಕೊಟ್ಟರು. ಅವರು ಇಂದು ನಮ್ಮನ್ನು ಅಗಲಿ ಹೋಗಿದ್ದರೂ ಅವರು ಹಾಕಿಕೊಟ್ಟ ಕಾರ್ಯಕ್ರಮಗಳು ನಮ್ಮ ದೇಶದಲ್ಲಿವೆ. ಅವರು ಒಂದು ಶಕ್ತಿಯಾಗಿ ಪರಿಣಮಿಸಿದ್ದರು. ಅವರು ಹಾಕಿಕೊಟ್ಟ ಕಾರ್ಯಕ್ರಮಗಳು ನಮ್ಮ ಮುಂದಿದೆ. ಇಂಥ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ನಾವು ಅವರಿಗೆ ಮತ್ತು ಅವರ ಕುಟುಂಬವರ್ಗದವರಿಗೆ ಶ್ರದ್ಧಾಂಜಲಿ ಅರ್ಪಿಸಿ ಅವರ ಆತ್ಮಕ್ಕೆ ದೇವರು ಚಿರಶಾಂತಿ ಕೊಡಲಿ ಎಂದು ಹಾರೈಸಿ, ನಾನೂ ಕೂಡ ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿರತಕ್ಕ ಶ್ರದ್ಧಾಂಜಲಿ ಸೂಚನೆಗೆ ಬೆಂಬಲಕೊಡುತ್ತಾ, ನನ್ನ ಹಾಗೂ ಎಲ್ಲಾ ಸದಸ್ಯರ ಮತ್ತು ರಾಜ್ಯದ ಎಲ್ಲಾ ಜನತೆಯ ಪರವಾಗಿ ಶ್ರದ್ಧಾಂಜಲಿಯನ್ನು ಅರ್ಪಿಸಿ, ನನಗೆ ಮಾತನಾಡಲು ಇಷ್ಟು ಅವಕಾಶ ಕೊಟ್ಟ ತಮಗೂ ಧನ್ಯವಾದಗಳನ್ನರ್ಪಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

SRI R.S. MANE.—Mr. Speaker, Sir, on behalf of the Maharastre Ekikaran Samithi, which I represent in this House, I pay homage to the departed soul. 31st October was the darkest day in the history of the nation. Our beloved Prime Minister Smt. Indira Gandhi was brutally assasinated on that day. The stengun that was blasted at her was really pointed at the very existence of the democracy in this country and therefore we must pay homage in words as well as in deeds. When she took over as the Prime Minister of the country, the country was faced with many major and minor issues. However, by her ability and by her love of the people, she soon became a very able Prime Minister of the country. Not only she reigned the country. itself for 16 years but she alsoreigned the hearts of 70 crores of Indians. When I last met her in the month of March 1984 on the22nd she discussed the boundary dispute with me. It was really surprising that Prime Minister faced with major issues Should also have detailed knowledge of issues which are in the context of the nation minor but in the context of 15 lakhs of marathi speaking people a major issue. She exhibited then a very detailed knowledge of the problem. The 15 lakhs of marathi speaking people were hopeful that had Mrs. Gandhi lived some days more, a just solution to this problem, which is pending for the last 29 years, would have been found and therefore 15 laks of Marathi speaking people join me in expressing their sorrow and in paying homage to the departed soul, I support this resolution of condolence.

Thank you.

ಶ್ರೀ ಎಸ್. ಬಂಗಾರಪ್ಪ (ಸೊರಬ).—ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸಭಾನಾಯಕರ್ಯ ಮಂಡಿಸಿರತಕ್ಕ ನಿರ್ಣಯಕ್ಕೆ ನಮ್ಮೆಲ್ಲರ ಬೆಂಬಲವಿದೆ. ಈ ಒಂದು ಸಂದರ್ಭದಲ್ಲಿ ಅಗಲಿ ಹೋಗಿರತಕ್ಕ ಮಹಾವ್ಯಕ್ತಿಗೆ ನಾವು ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದ್ದೇವೆ. ನಿಜಕ್ಕೂ ಇದೊಂದು ದೊಡ್ಡ ದುರಂತ ; ಇದು ಆಗಬಾರದಾಗಿತ್ತು. ಒಬ್ಬ ವ್ಯಕ್ತಿ ಯಾವುದೇ ದೇಶದಲ್ಲಿರಲಿ, ಅವನು ರಾಷ್ಟ್ರದ ಹಿತಕ್ಕಾಗಿ ಪ್ರಪಂಚದ ಕಲ್ಯಾಣಕ್ಕಾಗಿ ತನ್ನನ್ನು ತಾನು ಅಪ್ಪಣೆ ಮಾಡಿಕೊಂಡಿರತಕ್ಕ ವ್ಯಕ್ತಿ ಇದ್ದರೆ, ಅವನ ಆದರ್ಶಗಳು, ನೀತಿಗಳು ಇದ್ದರೆ ಅಂಥವರನ್ನು ಅಷ್ಟು ಸುಲಭವಾಗಿ ಅಗಲಿ ಹೋಗುವುದಕ್ಕೆ ಬಿಡ ಬಾರದು. ಆ ವ್ಯಕ್ತಿತ್ವದ ಸದುಪಯೋಗವನ್ನು ಸಮಾಜ ಅಥವಾ ದೇಶ ಮಾಡಿಕೊಳ್ಳಬೇಕಾಗುತ್ತದೆ. ನಮಗೆ ಒಂದೊಂದು ಸಾರಿ ಅನ್ನಿಸುತ್ತದೆ. ಮಹಾತ್ಮ ಗಾಂಧೀಜಿಯವರೂ ನಮ್ಮನ್ನು ಅಗಲಿ ಹೋದಾಗಲೂ ಕೂಡ ಸಾಮಾನ್ಯ ವ್ಯಕ್ತಿಯ ಗುಂಡಿಗೆ ಬಲಿಯಾದರು. ನಾವು ಎಲ್ಲರಿಗೂ ಬರುತ್ತದೆ ; ಆದರೆ

ಈ ರೀತಿ ಬರಬಾರದು. ಆರ್ಥಿಕ ವಿಚಾರದಲ್ಲಿ, ರಾಜಕೀಯ ಪಕ್ಷದಲ್ಲಿ ಮತ್ತಿತರ ವಿಚಾರಗಳಲ್ಲಿ ಭಿನ್ನಾಭಿಪ್ರಾಯಗಳಿದ್ದರೂ ಸಹ ಇಂದಿರಾಗಾಂಧಿಯವರ ಆದರ್ಶಗಳನ್ನು ನಾವು ಕೊಂಡಾಡುತ್ತೇವೆ. ಕಾರಣ, ಅವರು ರಾಷ್ಟ್ರದ ಏಳಿಗೆಗಾಗಿ ಯಾವುದೇ ತ್ಯಾಗಕ್ಕೂ ಸಿದ್ಧವಾಗಿದ್ದ ವ್ಯಕ್ತಿ; ಅದೇ ವಂಶತನದಿಂದ ಬಂದಂತಹ ವ್ಯಕ್ತಿ. ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಸರ್ವ ಸಮಾಜ ಅನೇಕ ಧರ್ಮಗಳ, ಜಾತಿಗಳ, ಮತಗಳ ನಂಬಿಕೆಗಳ ಮತ್ತು ಕೆಲವೊಮ್ಮೆ ಪ್ರಾದೇಶಿಕ ಭಾವನೆಗಳ ಹಿನ್ನೆಲೆಯಲ್ಲಿರತಕ್ಕದ್ದಾಗಿದೆ. ಇದನ್ನು ಬಹಳ ಕಷ್ಟದಿಂದ, ಎಚ್ಚರಿಕೆಯಿಂದ ಮುಂದಾಲೋಚನೆಯಿಂದ ನಡೆಸಬೇಕಾಗುತ್ತದೆ. ಅಂಥ ಗುಣಗಳು ಒಬ್ಬ ವ್ಯಕ್ತಿಯಲ್ಲಿದ್ದಾಗ ಮಾತ್ರ ಅಂಥ ನಾಯಕತ್ವ ನಮ್ಮ ಸಮಾಜಕ್ಕೆ ಹಿಡಿಸುತ್ತದೆ; ಇಲ್ಲದಿದ್ದರೆ ಅದು ಸಾಧ್ಯವಾಗುವುದಿಲ್ಲ. ಶ್ರೀಮತಿ ಇಂದಿರಾಗಾಂಧಿಯವರು, ಪಂಜಾಬಿನಲ್ಲಿ ಎಷ್ಟೇ ಘಟನೆಗಳು ನಡೆದರೂ ಕೂಡ ಕೋಮು ಭಾವನೆಗಳನ್ನು ಎತ್ತಬಾರದೆಂಬ ಆದರ್ಶವನ್ನು ಕೊನೆಯವರೆಗೆ ಪಾಲಿಸಿಕೊಂಡು ಬಂದರು. ಹಲವಾರು ಧರ್ಮಗಳಿಗೆ ಅಂಟಿಕೊಂಡಿರತಕ್ಕ ವರ್ಗಗಳಿಗೆ ಪದೇಪದೇ ಏನಂತಿ ಮಾಡುತ್ತಿದ್ದರು ಎಂಬ ವಿಚಾರ ನವ್ಯಗೆಲ್ಲ ಗೊತ್ತಿದೆ. ಇಂಥ ಆದರ್ಶಗಳನ್ನು ಹೊಂದಿದ್ದಂತಹ ವ್ಯಕ್ತಿಯ ಆದರ್ಶಗಳು ಒಬ್ಬ ಸಾಮಾನ್ಯ ಅಂಗರಕ್ಷಕರ ಗುಂಡಿಗೆ ಬಲಿಯಾಯಿತಲ್ಲ. ಇಂಥ ವ್ಯಕ್ತಿಗಳ ಬಗ್ಗೆ ವಿಚಾರ ಮಾಡತಕ್ಕದ್ದು ಎಲ್ಲರ ಕರ್ತವ್ಯವೆಂದು ಈ ಸಂದರ್ಭದಲ್ಲಿ ಹೇಳಂತ್ತೇನೆ. ಈಗಾಗಲೇ ಸಭಾನಾಯಕರು, ವಿರೋಧ ಪಕ್ಷದ ನಾಯಕರು ಮತ್ತು ಬೇರೆ ಪಕ್ಷಗಳ ಮುಖಂಡರುಗಳು ಬಹಳ ಒಳ್ಳೆಯ ರೀತಿಯಲ್ಲಿ ವಿಚಾರಗಳನ್ನು ಸದನದ ಮುಂದಿಟ್ಟಿದ್ದಾರೆ ಮತ್ತು ನಿರ್ಣಯಕ್ಕೆ ಬೆಂಬಲ ಕೊಟ್ಟಿದ್ದಾರೆ. ರಾಷ್ಟ್ರದ ಆಂತರಿಕ ವಿಷಯಗಳ ಬಗ್ಗೆ ಇರಲಿ ಅಥವಾ ರಾಷ್ಟ್ರಕ್ಕೆ ಸಂಬಂಧಪಟ್ಟ ಹೊರಗಡೆಯ ವಿಚಾರಗಳು ಇರಬಹುದೂ–ಅವುಗಳ ಬಗ್ಗೆ ಶ್ರೀಮತಿ ಇಂದಿರಾಗಾಂಧಿಯವರು ತಾವು ಅಧಿಕಾರದಲ್ಲಿದ್ದಾಗ ತೋರಿಸಿರತಕ್ಕ ಚಾಣಾಕ್ಷತನ, ಚಾಣ್ಕ್ಯ ವೈಚಕ್ಷತಕ್ಕದ್ದಾಗಿದೆ. ಅವರಂ ಅನುಭವದ ಆಧಾರದ ಮೇಲೆ ಸಮಸ್ಯೆಗಳನ್ನು ನೋಡುತ್ತಿದ್ದರು. ಮತ್ತು ಅವುಗಳನ್ನು ಬಗೆಹರಿಸತಕ್ಕ ಪ್ರಾಮಾಣಿಕ ಪ್ರಯತ್ನವನ್ನೂ ಮಾಡುತ್ತಿದ್ದರು.

ಶ್ರೀಮತಿ ಇಂದಿರಾಗಾಂಧಿಯವರು ಅಮೇರಿಕಾಕ್ಕೆ ಹೋಗಿದ್ದಾಗ ಅಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ಮತ್ತು ದೂರದರ್ಶನದಲ್ಲಿ ಯಾವರೀತಿ ಮಾತನಾಡಿದ್ದಾರೆ ಎಂಬುದನ್ನು ಪತ್ರಿಕೆಯಲ್ಲಿ ಓದಿ ತಿಳಿದಿದ್ದೇನೆ. ರಷ್ಯ ದೇಶ ತನ್ನ ಸೈನ್ಯವನ್ನು ಅಫ್ಘಾನೀಸ್ತಾನಕ್ಕೆ ಕಳುಹಿಸುವುದನ್ನು ನೀವು ಖಂಡಿಸುವುದಿಲ್ಲವೇ ಎಂಬ ಮಾತನ್ನು ಪತ್ರಿಕಾಕರ್ತರು ಕೇಳಿದಾಗ ''ನೀವು ಒಂದೇ ವಿಚಾರವನ್ನು ಏತಕ್ಕೆ ನೋಡುತ್ತಿದ್ದೀರಿ? ಉದಾಹರಣೆಗೆ ಕೆನಡಾ ಐಲ್ಯಾಂಡ್ ಇದೆ. ಅಮೇರಿಕಾದವರು ಹಸ್ತಕ್ಷೇಪ ಮಾಡಿದರೆ ಅದನ್ನು ನೀವು ಏತಕ್ಕೆ ಖಂಡಿಸುತ್ತಿಲ್ಲ'' ಎಂಬ ಚಾಣಾಕ್ಷತನದ ಉತ್ತರವನ್ನು ಕೊಟ್ಟಿದ್ದಾರೆ. ಈ ರೀತಿ ಅವರು ಚಾಣಾಕ್ಷತನದಿಂದ ಮಾತನಾಡಿರುವ ಉದಾಹರಣೆಗಳು ಬೇಕಾದಷ್ಟಿವೆ. ಅಂತರರಾಷ್ಟ್ರೀಯ ವಿಚಾರಗಳಲ್ಲಿ, ವಿದೇಶಾಂಗ ನೀತಿ ವಿಚಾರಗಳಲ್ಲಿ ಚಾಣಾಕ್ಷತನದಿಂದ ಉತ್ತರ ಕೊಡತಕ್ಕದ್ದನ್ನು, ಚಾಣ್ಕ್ಯನಿಂದ ಸಮಸ್ಯೆಗಳನ್ನು ಬಗೆಹರಿಸತಕ್ಕದ್ದನ್ನು ನೋಡಿದಾಗ ಅವರಿಗೆ ಅಪಾರವಾದ ಅನುಭವ ಇತ್ತು ಎಂಬುದು ಪ್ರಶ್ನಾತೀತವಾದದು. ಪಂಜಾಬ್ ಸಮಸ್ಯೆ, ಅಸ್ಸಾಂ ಸಮಸ್ಯೆ ಮತ್ತು ಕಾಶ್ಮೀರ ಸಮಸ್ಯೆಹಾಗೂ ರಾಷ್ಟ್ರದ ಯಾವುದೇ ಮೂಲೆಯಲ್ಲಿ ಬಂದ ಸಮಸ್ಯೆಗಳನ್ನು ತಮ್ಮ ವಿಚಾರಲಹರಿ ಅಥವಾ ಅನುಭವದ ಹಿನ್ನೆಲೆಯಲ್ಲಿ ಅವುಗಳನ್ನು ಬಗೆಹರಿಸುತ್ತಿದ್ದರು ಎಂಬ ಮಾತನ್ನು ಎಲ್ಲರೂ ಒಪ್ಪಬೇಕಾಗುತ್ತದೆ. ನಾನು ಕಾಂಗ್ರೆಸ್ ಪಕ್ಷದ ಅಧ್ಯಕ್ಷನಾಗಿದ್ದಾಗ ೧೯೮೦ರ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಶ್ರೀಮತಿ ಇಂದಿರಾಗಾಂಧಿಯವರ ಜೊತೆಯಲ್ಲಿ ಎರೆಡು ಮೂರು ಸಾರಿ ಕರ್ನಾಟಕದಲ್ಲಿ ಪ್ರವಾಸಮಾಡಿದೆ ಹೆಲಿಕಾಪ್ಟರ್‌ನಲ್ಲಿ, ಕಾರಿನಲ್ಲಿ ಅವರ ಜೊತೆ ಹೋಗುವಾಗ ಯಾವರೀತಿ ಅವರು ಸಮಸ್ಯೆಗಳನ್ನು ಪ್ರಸ್ತಾಪ ಮಾಡುತ್ತಿದ್ದರು ಅದಕ್ಕೆ ಪರಿಹಾರ ಸೂಚಿಸುತ್ತಿದ್ದರು ಎಂಬುದನ್ನು ನೋಡಿದರೆ ದೇಶಗಳ ಬಗ್ಗೆ ಅವರಿಗೆ ಅಪಾರವಾದ ಕಳಕಳಿ ಇತ್ತು ಎಂಬುದು ಗೊತ್ತಾಗುತ್ತದೆ. ಈ ಮಾತನ್ನು ಎಲ್ಲ ರಾಜಕೀಯ ಪಕ್ಷದವರು ಮತ್ತು ರಾಷ್ಟ್ರದ ಎಲ್ಲ ಜನತೆ ಮನಸಾರೆ ಒಪ್ಪುವೆ. ಈ ಸಂದರ್ಭದಲ್ಲಿ ಅಗಲಿಹೋಗಿರತಕ್ಕೆ ಈ ಮಹಾನ್ ವ್ಯಕ್ತಿಯ ಹಲವಾರು ಆದರ್ಶಗಳನ್ನು ಗುರಿಯಾಗಿಟ್ಟುಕೊಂಡು ಮುಂದಿನ ಭವಿಷ್ಯದ ಚಿಂತನೆ ಮಾಡಿ ಸಮಾಜದ ಎಲ್ಲ ಭಾಷೆ, ಮತ, ಧರ್ಮಗಳನ್ನು ಒಟ್ಟಾಗಿ ತೆಗೆದುಕೊಂಡು ಹೋಗುವುದರ ಮೂಲಕ ಅವರ ಆದರ್ಶಗಳನ್ನು ಪಾಲನೆ ಮಾಡಿಕೊಂಡು ಹೋಗಬೇಕೆಂದು ಹೇಳುತ್ತೇನೆ. ಈ ಕೊಲೆ ಏತಕ್ಕಾಯಿತು, ಹಂತಕರು ಯಾವ ಕಾರಣಕ್ಕಾಗಿ ಕೊಲೆ ಮಾಡಿದರು ಎಂಬ ವಿಚಾರ ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿರತಕ್ಕದ್ದೆ. ಎಲ್ಲ ಮತಗಳವರೂ ಒಟ್ಟಾಗಿ ಮುನ್ನಡೆಯು

ಬೇಕು, ಎಲ್ಲರೂ ಒಂದಾಗಿ ಬಾಳಬೇಕು ಎಂಬ ಆದರ್ಶವನ್ನಿಟ್ಟುಕೊಂಡು ೧೬ ವರ್ಷಗಳ ಕಾಲ ಪ್ರಧಾನ ಮಂತ್ರಿಯಾಗಿ ಮಹತ್ತರ ಸೇವೆಯನ್ನು ಸಲ್ಲಿಸಿರತಕ್ಕ ಅವರ ಭಾವಚಿತ್ರವನ್ನು ಈ ಸದನದಲ್ಲಿ ಇಟ್ಟರೆ ಒಳ್ಳೆಯದು ಎಂದು ಸಲಹೆ ಮಾಡುತ್ತಿದ್ದೇನೆ. ಮಾನ್ಯ ಅಧ್ಯಕ್ಷರ ಜೊತೆ ಸಭಾನಾಯಕರು, ವಿರೋಧಪಕ್ಷದ ನಾಯಕರು ಸಮಾಲೋಚನೆ ಮಾಡಿ ಅಮೂಲ್ಯ ಆದರ್ಶಗಳಿಗೆ ತಮ್ಮನ್ನು ತಾವೇ ಅರ್ಪಣೆ ಮಾಡಿಕೊಂಡಿರತಕ್ಕ ವ್ಯಕ್ತಿಯ ಭಾವಚಿತ್ರವನ್ನು ಇಟ್ಟರೆ ಅದನ್ನು ನೋಡಿ ಅವರ ಆದರ್ಶಗಳು ನಮ್ಮ ನೆನಪಿಗೆ ಬಂದು ನಮ್ಮ ಮನಸ್ಸಿನ ಮೇಲೆ ಪರಿಣಾಮವನ್ನುಂಟು ಮಾಡುತ್ತದೆ ಎಂಬ ಮಾತನ್ನು ಹೇಳುತ್ತಿದ್ದೇನೆ ಇಷ್ಟು ಮಾತ್ರ ಈ ಸಂದರ್ಭದಲ್ಲಿ ಹೇಳಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ (ಭಾಲ್ಕಿ)—ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಎರಡು ಮಾತುಗಳನ್ನು ಸದನದ ಮುಂದೆ ಇಡುತ್ತೇನೆ. ನನ್ನ ದೃಷ್ಟಿಯಲ್ಲಿ ಶ್ರೀಮತಿ ಇಂದಿರಾಗಾಂಧಿಯವರಿಗೆ ಶ್ರದ್ಧಾಂಜಲಿಯನ್ನು ಯಾವ ಪ್ರಕಾರ ಅರ್ಪಣೆ ಮಾಡಬೇಕೋ ಹಾಗೆ ವಾಸ್ತವಿಕವಾಗಿ ಅದನ್ನು ಮಾಡುತ್ತಿದ್ದೇವೆ. ವ್ಯಕ್ತಿಯೇ ರಾಷ್ಟ್ರ, ರಾಷ್ಟ್ರವೇ ವ್ಯಕ್ತಿ ಎಂಬ ಮಾತು ಶ್ರೀಮತಿ ಇಂದಿರಾ ಗಾಂಧಿಯವರ ಬಗ್ಗೆ ಬಂತು. ಶ್ರೀಮತಿ ಇಂದಿರಾ ಗಾಂಧಿಯವರು ಯಾವರೀತಿ ರಾಷ್ಟ್ರಕ್ಕಾಗಿ ಕೆಲಸ ಮಾಡಿದವರು ಎಂಬುದನ್ನು ನಾವು ನೋಡಬೇಕಾಗಿದೆ. ನಮ್ಮ ಸಂವಿಧಾನದಲ್ಲಿ ಮುಖ್ಯವಾ ಮೂರು ಅಂಶಗಳನ್ನು ತಿಳಿಸಲಾಗಿದೆ ಡೆಮಾಕ್ರೆಸಿ ಸೋಷಿಯಲಿಸಂ ಮತ್ತು ಸೆಕ್ಯುಲರಿಸಂ ಆ ಅಂಶಗಳು. ಶ್ರೀಮತಿ ಇಂದಿರಾಗಾಂಧಿಯವರು ಡೆಮಾಕ್ರೆಸಿಗೆ ಎಷ್ಟು ಗೌರವಕೊಡುತ್ತಿದ್ದರು ೧೯೭೭ರಲ್ಲಿ ಚುನಾವಣೆ ಮಾಡಿದರೆ ಏನು ಪರಿಣಾಮವಾಗುತ್ತದೆ ಎಂದು ಗೊತ್ತಿದ್ದರೂ ಕೂಡ ಡೆಮಾಕ್ರೆಸಿ ಪ್ರಕಾರ ೫ ವರ್ಷದ ನಂತರ ಚುನಾವಣೆ ಮಾಡಬೇಕೆಂದು ಮಾಡಿದರು. ಇದೊಂದೇ ಉದಾಹರಣೆ ಸಾಕು ಡೆಮಾಕ್ರೆಸಿ ಬಗ್ಗೆ ಅವರಿಗೆ ಯಾವರೀತಿ ನಂಬಿಕೆ ಇತ್ತು ಎಂಬುದಕ್ಕೆ. ಸೋಷಿಯಲಿಸಂ ಬಗ್ಗೆ ಹೇಳಬೇಕೆಂದರೆ, ೨೦ ಅಂಶದ ಕಾರ್ಯಕ್ರಮವನ್ನು ರಾಷ್ಟ್ರದ ಜನತೆಗಾಗಿ ಮಾಡಿದ್ದರು ಬ್ಯಾಂಕುಗಳವರು ಮೊದಲು ಕೋಟ್ಯಾಧಿಪತಿಗಳನ್ನು, ಲಕ್ಷಾಧಿಪತಿಗಳನ್ನು ನೋಡುತ್ತಿದ್ದರು, ಇವರು ದರಿದ್ರ ನಾರಾಯಣರ ಕಡೆಯೂ ಬ್ಯಾಂಕುಗಳವರು ಗಮನ ಕೊಡುವಂತೆ ಮಾಡಿದರು. ಬಡತನ ದೂರ ಮಾಡುವ ಸಲುವಾಗಿ ಗರೀಬಿ ಹಠಾವೊ ಎಂಬ ಸ್ಲೋಗಾನ್ ಪ್ರಕಾರ ಕಲಸ ಮಾಡಿದ್ದಾರೆ. ಎನ್. ಆರ್. ಇ. ಪಿ. ಐ. ಆರ್. ಡಿ. ಪಿ. ಕಾರ್ಯಕ್ರಮಗಳನ್ನು ಜನತಾ ಮನೆಗಳನ್ನು ಕೊಡುವ ಕಾರ್ಯಕ್ರಮಗಳನ್ನು ಮಾಡಿ ಗರೀಬಿ ಹಠಾವೊ ಎಂಬ ಘೋಷಣೆಯನ್ನು ಕೃತಿಯಲ್ಲಿ ತಂದಿದ್ದಾರೆ. ಸೆಕ್ಯುಲರಿಸಂ ಬಗ್ಗೆ ಹೇಳಬೇಕೆಂದರೆ ಅವರು ಐಕ್ಯತೆಗಾಗಿ ಹೋರಾಟ ಮಾಡಿದ್ದರ ಪರಿಣಾಮವಾಗಿ ಆತ್ಮಾಹುತಿ ಮಾಡಬೇಕಾದ ಸಂದರ್ಭ ಬಂತು. ನಮ್ಮ ದೇಶದ ಸಂಸ್ಕೃತಿಯನ್ನು ನೋಡಿದಾಗ ಎರಡು ಸಾವಿರ ವರ್ಷಗಳ ಭಾರತದ ಇತಿಹಾಸದಲ್ಲಿ ಮಂಗೋಲಿಯ, ಆರ್ಯನ್ ತೈಮೂರ್ ನಂತರ ಚಂಗೀಸ್‌ಖಾನ್, ಅಲೆಗ್ಸಾಂಡರ್, ಮಹಮದ್‌ಬಿನ್ ಖಾಸಿಂ, ಘೋರಿಮಹಮ್ಮದ್, ಖಿಲ್ಜಿ, ಮೊಗಲ್, ಅಹಮದ್ ಷಾ ಅಬ್ದಾಲ್, ಇವರೆಲ್ಲರ ಹೋರಾಟದ ಸಮಯದಲ್ಲಿಯಾಗಲಿ, ಚೈನಾ ಧಾಳಿಯಾದಾಗ ಆಗಲಿ ಹೆಂಗಸರು ಧೈರ್ಯದಿಂದ ಹೋರಾಡಲಿಲ್ಲ. ಆದರೆ ಬಾಂಗ್ಲಾ ದೇಶದ ಸ್ವಾತಂತ್ರ್ಯದ ಬಗ್ಗೆ ಪಾಕಿಸ್ತಾನದವರು ಯುದ್ಧ ಮಾಡಿದಾಗ ಯಾವರೀತಿ ಧೈರ್ಯದಿಂದ, ಮುತ್ಸದ್ದಿತನದಿಂದ ಶ್ರೀಮತಿ ಇಂದಿರಾ ಗಾಂಧಿಯವರು ಹೋರಾಟ ಮಾಡಿದ್ದಾರೆ ಎಂಬುದು ಎಲ್ಲರಿಗೂ ಗೊತ್ತು. ಆಗ ನಡೆದ ಯುದ್ಧದಲ್ಲಿ ೯೬ ಸಾವಿರ ಸೈನಿಕರು ಶರಣಾಗತರಾಗುವಂತೆ ಮಾಡಿದ್ದಾರೆ. ಎರಡು ಸಾವಿರ ವರ್ಷಗಳ ಇತಿಹಾಸದಲ್ಲಿ ಇದು ಪ್ರಾಮುಖ್ಯವಾದಘಟನೆಯಾಗಿದ್ದು ಈ ಗೌರವಕ್ಕೆ ಶ್ರೀಮತಿ ಇಂದಿರಾ ಗಾಂಧಿಯವರು ಪಾತ್ರರಾಗಿದ್ದಾರೆ.ಭಾರತ ದೇಶ ದುರ್ಬಲ ದೇಶ ಅಲ್ಲ,ವೀರ ದೇಶ ಎಂಬುದನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಸಿದ್ಧ ಮಾಡಿ ತೋರಿಸಿದ್ದಾರೆ. ಅಣು ಬಾಂಬ್ ಇಟ್ಟುಕೊಂಡಿರುವ ರಷ್ಯ, ಚೈನಾ ಮುಂತಾದ ದೇಶಗಳವರನ್ನು ವಿಸ್ಮಯ ಮಾಡಿ ಭಾರತೀಯ ನಾರಿಯಾದ ಇಂದಿರಾ ಗಾಂಧಿಯವರು ನಮ್ಮ ರಾಷ್ಟ್ರದ ಭುಂಡಾವನ್ನು ಜಗತ್ತಿನಲ್ಲಿ ಎತ್ತಿಹಿಡಿದಿದ್ದಾರೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಸ್ತ್ರೀ ಜಾತಿಗೆ ನಾವು ಅಬಲೆ ಎಂದು ಹೇಳುತ್ತೇವೆ. ಆದರೆ ಇಲ್ಲಿ ಇವರು ಸಬಲೆ ಎಂಬುದನ್ನು ತೋರಿಸಿದ್ದಾರೆ. ಭೀಷ್ಮಾಚಾರ್ಯರಿಗೂ ಅರ್ಜುನನಿಗೂ ಯುದ್ಧ ನಡೆದಾಗ ಶಿಖಂಡಿ ಮಧ್ಯೆ ಬಂದಾಗ ಭೀಷ್ಮಾಚಾರ್ಯ ಬಾಣ ಪ್ರಯೋಗ ಮಾಡಲಿಲ್ಲ. ಶಿಖಂಡಿ ಎಂಬ ದೃಷ್ಟಿಯಿಂದ ಬಾಣ ಪ್ರಯೋಗ ಮಾಡಬಾರದು ಎಂದು ಹೇಳಿದಂಥ ಸಂಸ್ಕಾರ ಇರುವಾಗ ಒಂದು ಹೆಣ್ಣಿನ ಮೇಲೆ ಗುಂಡು ಹಾರಿಸಿದ್ದಾರೆ. ಬಸವಣ್ಣನವರು ಸ್ತ್ರೀಯರು ಮತ್ತು ಪುರುಷರ್ಯ

ಒಂದೇ ಎಂದು ಹೇಳಿದ್ದರು. ಆದರೆ ಸ್ತ್ರೀಯರು ಪುರುಷರಿಗಿಂತ ದೊಡ್ಡವರು ಎಂಬುದನ್ನು ಇಂದಿರಾ ಗಾಂಧಿಯವರು ಸಿದ್ಧ ಮಾಡಿ ತೋರಿಸಿದ್ದಾರೆ. ಒಬ್ಬ ಹೆಣ್ಣುಮಗಳು ತನ್ನ ಮುತ್ಸದ್ದಿತನದಿಂದ ೧೦೩ ರಾಷ್ಟ್ರಗಳಿಗೆ ಅಧ್ಯಕ್ಷಿಣಿಯಾಗಿ ಜಗತ್ತಿನಲ್ಲಿ ಶಾಂತಿ ಸ್ಥಾಪಿಸುವ ಸಲುವಾಗಿ ದುಡಿದಿದ್ದಾಳೆ. ಹೆಣ್ಣು ಅಬಲೆಯಲ್ಲ, ವೀರವಂತೆ, ಶೂರವಂತೆ ಎಂಬದನ್ನು ಜಗತ್ತಿಗೇ ತೋರಿಸಿದ್ದಾರೆ. ನಾರೀ ಕುಲಕ್ಕೇ ಭೂಷಣವಾಗಿದ್ದರು ಇಂದಿರಾಗಾಂಧಿ ಎಂದು ಹೇಳಬೇಕಾಗಿದೆ. ಭಾರತ ದೇಶಕ್ಕೆ ದೊಡ್ಡ ಹೆಸರು ಬರಬೇಕಾದರೆ ಅದಕ್ಕೆ ಇಂದಿರಾ ಗಾಂಧಿಯವರೇ ಕಾರಣ. ಅಂಥ ದೊಡ್ಡ ವ್ಯಕ್ತಿ ನಮ್ಮನ್ನು ಬಿಟ್ಟುಹೋಗಿದ್ದಾರೆ. ಯೇಸುಕ್ರಿಸ್ತ, ಮಹಮದ್ ಪೈಗಂಬರ್, ಸಾಕ್ರೆಟೀಸ್, ಮಹಾತ್ಮಗಾಂಧಿ, ಸುಭಾಷ್ ಚಂದ್ರಬೋಸ್ ಇವರೆಲ್ಲರೂ ಒಂದೊಂದು ರೀತಿಯಲ್ಲಿ ಹೋರಾಟಮಾಡಿ ಅಗಲಹೋಗಿದ್ದಾರೆ. ಆದನೆ ಶ್ರೀಮತಿ ಇಂದಿರಾಗಾಂಧಿಯವರು ರಾಜಕೀಯ ಕ್ಷೇತ್ರದಲ್ಲಿ, ಸಾಮಾಜಿಕ ಕ್ಷೇತ್ರದಲ್ಲಿ ಬಲಿದಾನ ಮಾಡಿ ಹುತಾತ್ಮರಾಗಿದ್ದಾರೆ. ಜಗತ್ತಿನ ನಾರಿಯರಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರು ಒಳ್ಳೆಯ ಆದ್ದೇಶಕ್ಕಾಗಿ ತಮ್ಮನ್ನು ಆಹುತಿ ಕೊಟ್ಟಿದ್ದಾರೆ. ಚಂದ್ರ, ಸೂರ್ಯ ಇರುವವರೆಗೆ ಅವರು ಅಜರಾಮರರಾಗಿರುತ್ತಾರೆ. ಭಾರತ ದೇಶಕ್ಕೆ ಗೌರವವನ್ನು ತಂದುಕೊಟ್ಟ ಅವರ ಕೀರ್ತಿ ಶಾಶ್ವತವಾಗಿರುತ್ತದೆ ಎಂದು ಹೇಳಬೇಕಾಗಿದೆ.

ಈ ಒಂದು ಕೊಲೆಯ ಹಿನ್ನಲೆಯಲ್ಲಿ ಸಾಮ್ರಾಜ್ಯ ಶಾಹೀ ಕೈ ಅಡಕವಾಗಿದೆ. ನಮ್ಮಲ್ಲಿರುವ ದುರ್ಬಲತೆಯನ್ನು, ಹೇಡಿತನವನ್ನು ಉಪಯೋಗಿಸಿಕೊಂಡು ಜಾತಿ ಜಾತಿಗಳಲ್ಲಿ ವೈಮನಸ್ಸನ್ನು ತಂದುದರ ಫಲವಾಗಿ ಇವತ್ತು ನಮ್ಮ ಜನತೆ ಆಹುತಿಯಾಗುತ್ತಿದ್ದಾರೆ. ೧೯೭೦ರಲ್ಲಿ ನಾನು ಒಂದು ''ಭಾರತ ರಕ್ಷಿಸಿ'' ಎಂಬ ಪುಸ್ತಕವನ್ನು ಬರೆದು ಹಂಚಿದೆ. ಭಾರತ ದೇಶ ಎತ್ತ ಹೋಗುತ್ತಿದೆಯೋ ನನಗೆ ಗೊತ್ತಿಲ್ಲ, ನೇಪಾಳಿಯರಿಗೆ ಬೇರೆ ದೇಶ ಬೇಕಾಗಿದೆ, ಪಂಜಾಬಿನವರಿಗೆ ಖಲಿಸ್ತಾನ್ ಬೇಕಾಗಿದೆ, ಮುಸ್ಲಿಮಾನರಿಗೆ ಮತ್ತೊಂದು ಪಾಕಿಸ್ತಾನ ಬೇಕಾಗಿದೆ; ಬ್ರಾಹ್ಮಣರು ಬ್ರಾಹ್ಮಣೇತರ ಎಂದು ಲಿಂಗಾಯಿತರು ಲಿಂಗಾಯತೇತರ ಎಂದು ಹೇಳಿ ಪ್ರತ್ಯೇಕ ವ್ಯಾಂತ್ಯ ಕೇಳುತ್ತಾರೆ ಎಂದಿದ್ದಕ್ಕೆ ನನ್ನನು ಹುಚ್ಚ ಎಂದು ಹೇಳಿದರು. ಆದರೆ ಈಗ ಏನಾಗಿದೆ? ಎಷ್ಟೋ ವರ್ಷಗಳ ಹಿಂದಿನಿಂದಲೂ ಸಿಖ್ ಜನಾಂಗದವರನ್ನು ಅಂಗರಕ್ಷಕ ದಳದಿಂದ ತೆಗೆಯಬೇಕೆಂದು ಮೇಲಿಂದ ಮೇಲೆ ರಿಪೋರ್ಟ್‌ಗಳು ಬಂದರೂ ಸಹಾ ಅವರು ನನ್ನ ಮಕ್ಕಳು ಇದ್ದಂತೆ, ಅವರನ್ನು ತೆಗೆಯಲಾಗುವುದಿಲ್ಲವೆಂದು ಹೇಳಿದರು. ಆದರೆ ಇವತ್ತು ಅದರ ಪರಿಣಾಮ ಈ ರೀತಿ ಪರಿಣಮಿಸಿದೆ. ನಾಲ್ಕು ದಿವಸ ಒಂದು ನಾಯಿಗೆ ಅನ್ನ ಹಾಕಿದರೆ ಅದು ಸಾಯುವವರೆವಿಗೂ ಆತನನ್ನು ನೆನೆಸಿಕೊಳ್ಳುತ್ತದೆ. ಆದರೆ ಒಬ್ಬ ಮನುಷ್ಯ ತಿಂದ ಮನೆಗೆ ಎರಡು ಬಗೆದಿರುತ್ತಾನೆ. ಆತ ೧ ತಿಂಗಳು ರಜೆಯಲ್ಲಿ ಹೊರಗೆ ಹೋಗಿದ್ದಾಗ ಆತನ ಜನ ಅವನಲ್ಲಿ ವಿಷ ತುಂಬಿ ಕಳುಹಿಸಿದ್ದಾರೆ. ನಾವು ಸದನದಲ್ಲಿ ಬರೀ ಮಾತನಾಡುವುದರಿಂದ ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿದಂತಾಗುವುದಿಲ್ಲ. ನಮ್ಮ ನಾಯಕರುಗಳು ಜಾತಿ ಜಾತಿಗಳನ್ನು ಎತ್ತಿಕಟ್ಟಿ ಕಲಹವನ್ನು ಎಬ್ಬಿಸುವುದನ್ನು ನಿಲ್ಲಿಸಬೇಕು. ಅವರು ಈ ರೀತಿಯ ಜಾತೀ ರಾಜಕೀಯ ಮಾಡುವುದನ್ನು ನಿಲ್ಲಿಸಬೇಕು. ಈ ದಿನ ದೇಶದ ನಾಯಕರು, ಕಲಾವಿದರು, ಕಾದಂಬರಿಕಾರರು ಹಾಗೂ ಈ ಸದನದಲ್ಲಿ ಕುಳಿತಿರ ತಕ್ಕಂತಹ ಮಹನೀಯರು ಜಾತೀಯತೆಯ ವಿರುದ್ಧ ಹೋರಾಟ ಮಾಡಿದರೆ ಮಾತ್ರ ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿದಂತಾಗುತ್ತದೆ. ನಾವೆಲ್ಲರೂ ಒಂದೇ; ನಾವು ಭಾರತೀಯರು ಎಂದು ಎಲ್ಲರೂ ತಿಳಿದುಕೊಳ್ಳಬೇಕು. ದೇಶ ಹೀಗಾದರೆ, ಸೂರ್ಯ ಚಂದ್ರರಿರುವವರೆಗೂ ಶ್ರೀಮತಿ ಇಂದಿರಾಗಾಂಧಿಯವರು ನಮ್ಮೊಡನಿರುತ್ತಾರೆ. ನಾವಷ್ಟೇ ಅಲ್ಲ ನಮ್ಮ ಇಡೀ ದೇಶವೇ ಇವರಿಗೆ ವಾಸ್ತವಿಕ ಶ್ರದ್ಧಾಂಜಲಿಯನ್ನು ಅರ್ಪಿಸಬೇಕಾದರೆ ಮೊದಲು ಜಾತೀಯತೆಯನ್ನು ತೊಲಗಿಸಬೇಕು. ಈ ದಿನ ನಮ್ಮ ದೇಶ ಜಾತೀಯತೆಗೆ ಬಲಿಯಾಗಿದೆ. ಈ ದೇಶದ ಜಾತೀಯತೆಯ ಜ್ವಾಲೆಗೆ ನಮ್ಮ ಜನ ನೀರನ್ನು ಹಾಕುವುದರ ಬದಲು ಎಣ್ಣೆಯನ್ನು ಸುರಿಯುತ್ತಿದ್ದಾರೆ. ಈ ದಿನ ಈ ಬೆಂಕಿಗೆ ನೀರನ್ನು ಹಾಕಿ ಜಾತೀಯತೆಯನ್ನು ತೆಗೆಯಬೇಕು.

ಅಧ್ಯಕ್ಷರು:—ಶ್ರದ್ಧಾಂಜಲಿಯ ಬಗ್ಗೆ ಮಾತನಾಡಿ.

ಶ್ರೀ ಭೀಮಣ್ಣ ಖಂಡ್ರೆ.—ಈ ದಿನ ದೇಶದಲ್ಲಿ ಜಾತೀಯತೆಯ ಅಂಧಕಾರ ಬೆಳೆಯುತ್ತಿದೆ. ಈ ಬಗ್ಗೆ ನಾನು ಎರಡು ಮಾತುಗಳನ್ನು ಹೇಳುವುದನ್ನು ಮಾನ್ಯ ಅಧ್ಯಕ್ಷರು ತಿಳಿದುಕೊಳ್ಳಬೇಕು. ಇಲ್ಲಿ ಶ್ರದ್ಧಾಂಜಲಿ ವಾಸ್ತವಿಕ. ನಾಲ್ಕು ಗಂಟೆ ಅಥವಾ ನಾಲ್ಕು ವರ್ಷ ಕೂಗಿದರೆ ಅದು ಶ್ರದ್ಧಾಂಜಲಿ

ಯಾಗುವುದಿಲ್ಲ. ಈ ದೇಶದಲ್ಲಿ ಇರುವ ಜಾತೀಯತೆ ನಾಶವಾಗದ ಹೊರತು ನಾವು ಇಲ್ಲಿ ಮಾಡಿದ್ದೂ ಶ್ರದ್ಧಾಂಜಲಿಯಾಗುವುದಿಲ್ಲವೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—(ಕಮಲಾಪುರ) ಮಾನ್ಯ ಅಧ್ಯಕ್ಷರೇ, ಶ್ರೀಮತಿ ಇಂದಿರಾ ಗಾಂಧಿಯವರ ನಿಧನಕ್ಕಾಗಿ ಶ್ರದ್ಧಾಂಜಲಿಯನ್ನು ಅರ್ಪಿಸುವುದಕ್ಕಾಗಿ ನಾವೆಲ್ಲರೂ ಇಂದು ಇಲ್ಲಿ ಸೇರಿದ್ದೇವೆ. ಅಕ್ಟೋಬರ್ ೩೧ನೇ ತಾರೀಖು ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾಗಾಂಧಿಯವರು ಜಾತಿವಾದಿಗಳ ಮತ್ತು ವಿಚ್ಛಿದ್ರಕಾರಿಗಳ ಹಾಗೂ ಮತಾಂಧಕರ ಗುಂಡಿಗೆ ಬಲಿಯಾದರು. ಅಕ್ಟೋಬರ್ ೩೧ನೇ ತಾರೀಖು ಒಂದು ಕರಾಳದಿನವೆಂದು ಹೇಳಬಹುದು. ಅವಕ್ತಿನ ದಿವಸ ಶ್ರೀಮತಿ ಇಂದಿರಾ ಗಾಂಧಿಯವರು ನಮ್ಮನ್ನಗಲಿದ್ದಾರೆ. ಆದರೂ ಕೂಡಾ ಶ್ರೀಮತಿ ಇಂದಿರಾಗಾಂಧಿಯವರು ನಮ್ಮನ್ನು ಅಗಲಿ ಹೋಗಿಲ್ಲವೆಂದೆನಿಸುತ್ತದೆ. ಇನ್ನೂ ಅನೇಕ ದಶಕಗಳವರೆಗೆ ಅವರು ನಮ್ಮನ್ನು ಅಗಲಿ ಹೋಗಿದ್ದಾರೆಂದು ಹೇಳುವುದಕ್ಕಾಗುವುದಿಲ್ಲ. ಅವರು ನಮ್ಮ ಜೊತೆಯೇ ಇದ್ದುಕೊಂಡು, ದೇಶದ ಅಭಿವೃದ್ಧಿಗಾಗಿ ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದಾರೆಎನ್ನುವ ಭಾವನೆ ಮೂಡಿ ಬರುತ್ತದೆ. ಶ್ರೀಮತಿ ಇಂದಿರಾಗಾಂಧಿಯವರು ಇಡೀ ದೇಶಕ್ಕೆ ತಾಯಿಯಂತಿದ್ದರು. ಆ ಗಣ ಅವರಲ್ಲಿ ತುಂಬಿ ತುಳುಕಾಡುತ್ತಿತ್ತು. ಈ ದಿನ ದೇಶವನ್ನು ರಕ್ಷಣೆ ಮಾಡುವುದಕ್ಕೆ, ನಮ್ಮ ರಾಷ್ಟ್ರವನ್ನು ಅಭಿವೃದ್ಧಿಯ ಕಡೆಗೆ ಮುಂದುವರೆಸಿಕೊಂಡು ಹೋಗುವುದಕ್ಕೆ ಹಾಗೂ ಸಮಾಜವಾದ ಮತ್ತು ಪ್ರಜಾಪ್ರಭುತ್ವವನ್ನು ಮುಂದುವರೆಸಿಕೊಂಡು ಹೋಗುವುದಕ್ಕೆ ನಾವು ಪಣತೊಡದಿದ್ದಲ್ಲಿ ನಮ್ಮ ರಾಷ್ಟ್ರವನ್ನು ಮುಂದುವರೆಸಾವುದಕ್ಕೆ ಸಾಧ್ಯವಿಲ್ಲವೆಂದು ಅವರು ತಿಳಿದು ರಾಷ್ಟ್ರವನ್ನು ಮುನ್ನಡೆಸುವ ಕಡೆ ತಮ್ಮ ಬಹಳ ಶ್ರಮಿಸಿದ್ದರು. ಹಾಗೂ ನಮ್ಮ ದೇಶವನ್ನು ವಿಶ್ವದ ಅನೇಕ ದೊಡ್ಡ ದೊಡ್ಡ ರಾಷ್ಟ್ರಗಳ ಪಂಕ್ತಿಯಲ್ಲಿ ಸೇರಿಸುವುದಕ್ಕಾಗಿ ಅವರು ಹಗಲಿರುಳೂ ದುಡಿದರು. ದೇಶದಲ್ಲಿ ಎಷ್ಟೇ ಸಮಸ್ಯೆಗಳು ಬಂದರೂ ಕೂಡಾ ಅವುಗಳನ್ನು ಎದುರಿಸಿ ದೇಶದ ಶಕ್ತಿಯಾಗಿ ನಿಂತ ಶ್ರೀಮತಿ ಇಂದಿರಾ ಗಾಂಧಿಯವರನ್ನು ಒಂದು ಶಕ್ತಿ ಎಂದು ತಿಳಿದು ಅನೇಕ ಜನ ಪೂಜೆ ಮಾಡುತ್ತಿದ್ದಾರೆ. ೧೯೭೧ರಲ್ಲಿ ಬಾಂಗ್ಲಾ ದೇಶವನ್ನು ಸ್ವತಂತ್ರಗೊಳಿಸಿದ ನಂತರ ಶ್ರೀಮತಿ ಇಂದಿರಾಗಾಂಧಿಯವರನ್ನು ದೇವೀ ಸ್ವರೂಪ, ದುರ್ಗಾದೇವಿ ಎಂದು ಇಡೀ ದೇಶದ ಜನ ಒಪ್ಪಿಕೊಂಡರು. ಅವರು ನಮ್ಮ ದೇಶದ ಬಡ ಜನರಿಗೆ, ದೀನದಲಿತರಿಗೆ ಅನೇಕ ವಿಧದಲ್ಲಿ ಅನೇಕ ರಂಗಗಳಲ್ಲಿ ಬೇಕಾದಷ್ಟು ಸೇವೆ ಸಲ್ಲಿಸಿದ್ದಾರೆ. ಅವರ ಆ ಸೇವೆಗಳನ್ನು ಕೇವಲ ಶಬ್ದಗಳಲ್ಲಿ ಹೇಳುವುದಕ್ಕೆ ಸಾಧ್ಯವಿಲ್ಲ. ಆ ಬಗ್ಗೆ ಅನೇಕ ಸಂಪುಟಗಳನ್ನು ಬರೆದರೂ ಸಾಧ್ಯವಾಗುವುದಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಇಂತಹ ಒಬ್ಬ ವ್ಯಕ್ತಿಯನ್ನು ಕಳೆದುಕೊಂಡ ನಾವುಗಳು ತಬ್ಬಲಿಗಳಾಗಿದ್ದೇವೆ. ಈ ಕೃತ್ಯದಿಂದ ನಮ್ಮ ದೇಶಕ್ಕೆ ತುಂಬಲಾರದಂತ ನಷ್ಟವಾಗಿದೆ. ಈ ಒಂದು ನಷ್ಟ ಬರೀ ನಮ್ಮ ದೇಶಕ್ಕೆ ಮಾತ್ರವಲ್ಲ, ಇದು ಇಡೀ ಜಗತ್ತಿಗೂ ಕೂಡಾ ಆಗಿರತಕ್ಕ ನಷ್ಟವೆಂದು ನಾನು ಹೇಳುತ್ತೇನೆ. ಶ್ರೀಮತಿ ಇಂದಿರಾಗಾಂಧಿಯವರಿಗೆ ಈ ದೇಶದ ಬಡ ಜನರು, ದೀನದಲಿತರ ಏಳಿಗೆಯ ಬಗ್ಗೆ ಎಷ್ಟು ವಿಶ್ವಾಸ ಇತ್ತೋ ಅಷ್ಟೇ ವಿಶ್ವಾಸವನ್ನು ಅವರು ಇತರೆ ದೇಶಗಳಲ್ಲಿ ಇರುವ ಬಡವರು ಹಾಗೂ ದೀನದಲಿತರ ಬಗ್ಗೆ ಇತ್ತು ಎಂದರೆ ತಪ್ಪಾಗಲಾರದು ಇವರು ಮೂರನೇ ಜಗತ್ತಿನ ನಾಯಕಿಯಾಗಿದ್ದರು. ಇವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದ. ಜಗತ್ತಿನ ನೂರಾರು ದೇಶಗಳ ಪ್ರತಿನಿಧಿಗಳನ್ನು ನೋಡಿದರೆ ಇವರಿಗೆ ಇಡೀ ವಿಶ್ವದಲ್ಲಿ ಯಾವ ಗೌರವ ಇತ್ತು, ಎಷ್ಟರ ಮಟ್ಟಿನ ಅಭಿಮಾನ ಇತ್ತು ಎಂಬುದೂ ನಮಗೆ ಗೊತ್ತಾಗುತ್ತಿದೆ. ಇವರು ವಿಶ್ವಕ್ಕೇ ನಾಯಕಿಯಾಗಿ ಜಗತ್ತಿನ ಇತಿಹಾಸದಲ್ಲಿ ಅಚ್ಚಳಿಯದ ಸ್ಥಾನವನ್ನು ಪಡೆದಿದ್ದಾರೆ. ವಿಚ್ಛಿದ್ರಕಾರಿಗಳ ಹಾಗೂ ಜಾತೀವಾದಿಗಳ ವಿರುದ್ಧ ಇವರ ಹೋರಾಟವಿತ್ತು. ಆದರೆ ಈ ಒಂದು ಶಕ್ತಿಯ ಗುಂಡಿಗೆ ಇವರು ಬಲಿಯಾದರು. ಇವರ ನಿಧನಕ್ಕಿಂತ ಕೆಲವು ದಿನಗಳ ಹಿಂದೆ ಒಬ್ಬ ವಿದೇಶಿ ಪತ್ರ ಕರ್ತ ಇವರನ್ನು ಒಂದು ಮಾತನ್ನು ಕೇಳಿದರು. ನೀವು ಪಂಜಾಬಿನಲ್ಲಿ ಮಿಲಿಟರಿ ಆಕ್ಷನ್ ತಂದಿರುವುದರಿಂದ ಅಲ್ಲಿನ ಸಿಖ್ಖರು ಕುಪಿತರಾಗಿದ್ದಾರೆ. ಅವರು ಸಿಟ್ಟನ್ನು ತೀರಿಸಿಕೊಳ್ಳಬೇಕೆಂದಿರುವುದರಿಂದ ನೀವು ಎಚ್ಚರಿಕೆಯಿಂದ ಇರಬೇಕಾದಂದು ಸಮಂಜಸವಲ್ಲವೇ ಎಂದು ಕೇಳಿದ್ದಕ್ಕೆ ಪ್ರಧಾನಿಯವರು ಅಲ್ಲೇ ಪಕ್ಕದಲ್ಲಿ ನಿಂತಿದ್ದ ಬಿಯಂತ್ ಸಿಂಗ್ ಕಡೆ ಕೈ ತೋರಿಸಿ, ಈತ ಒಬ್ಬ ಸಿಖ್ ಜನಾಂಗದವನೆಂದೂ ಈತ ಯಾವಾಗಲೂ ನನ್ನ ಪಕ್ಕದಲ್ಲಿಯೇ ಇದ್ದು ನನ್ನ ಸಂರಕ್ಷಣೆಯ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾ

ನೆನ್ನೆವ ಮಾತನ್ನು ಹೇಳಿದರು. ಹೀಗೆ ಹೇಳಿ ಅವರು ಒಂದು ಸಂಪ್ರದಾಯವನ್ನೇ ಸ್ಥಾಪಿಸಿದ್ದಾರೆ. ಇದರಿಂದ ಇವರು ಜಾತೀವಾದಿಯಲ್ಲವೆಂಬುದು ಗೊತ್ತಾಗುತ್ತದೆ. ಇಡೀ ದೇಶದ ಜನತೆ ಒಂದೇ ಎಂದು ಅವರು ತೋರಿಸಿದರು. ವಿಶ್ವದ ಅನೇಕ ನಾಯಕರನ್ನು ನಾವು ನೋಡಿದ್ದೇವೆ. ಆದರೆ ಇವರಂಗಳಲ್ಲಿ ಶ್ರೀಮತಿಗಾಂಧಿಯವರು ಅತ್ಯಂತ ಶ್ರೇಷ್ಠ ನಾಯಕರೆಂಬುದನ್ನು ನಾವು ನೋಡಿದ್ದೇವೆ. ನಾವೆಲ್ಲರೂ ಅವರ ಆದರ್ಶವನ್ನು ಪರಿಪಾಲಿಸಿ, ಅವರು ತೋರಿಸಿದ ದಾರಿಯಲ್ಲಿ ನಡೆದು ದೇಶದ ಅಭಿವೃದ್ಧಿಗೆ ತೊಡಗಿದ್ದೇ ಆದರೆ ಅದು ನಿಜವಾದ ಶ್ರದ್ಧಾಂಜಲಿಯಾಗುತ್ತದೆಂದೂ ಹಾಗೂ ಇವರಿಗೆ ಒಂದು ಕೀರ್ತಿ ಬರುತ್ತದೆಂದೂ ಹೇಳಿ ಈ ಸಂದರ್ಭದಲ್ಲಿ ತಾವು ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ನಾನು ನಮ್ಮ ಪಕ್ಷದ ಪರವಾಗಿ ಶ್ರೀಮತಿ ಇಂದಿರಾಗಾಂಧಿಯವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ಸಭಾ ನಾಯಕರೂ, ಮಾನ್ಯ ಪ್ರತಿ ಪಕ್ಷದ ನಾಯಕರೂ, ಭಿನ್ನ ಭಿನ್ನ ಪಕ್ಷಗಳ ಮಾನ್ಯ ನಾಯಕರುಗಳೂ ಹಾಗೂ ಇನ್ನೂ ಕೆಲವು ಸನ್ಮಾನ್ಯ ಸದಸ್ಯರುಗಳು ವ್ಯಕ್ತಪಡಿಸಿದ ಅಭಿಪ್ರಾಯಕ್ಕೆ ನಾನೂ ಕೂಡ ನನ್ನ ಧ್ವನಿಯನ್ನು ಸೇರಿಸಿಬಿಡ್ತೇನೆ. ಶ್ರೀಮತಿ ಗಾಂಧಿಯವರು ಜಾತಿ, ಭಾಷೆ, ಧರ್ಮ ರಾಜ್ಯ ಮತ್ತು ರಾಷ್ಟ್ರದ ಗಡಿಗಳನ್ನು ಮೆಟ್ಟಿ ನಿಂತ ಮಹಾನ್ ವ್ಯಕ್ತಿತ್ವ, ನನ್ನ ಮಂತ್ರು ಅವರ ವಿಶೇಷ ಬಾಂಧವ್ಯ ಹಾಗೂ ತೀರಾ ಹತ್ತಿರದಿಂದ ಕೆಲಸ ಮಾಡತಕ್ಕಂಥ ಸಂದರ್ಭ ನನಗೆ ಒದಗಿದ್ದ ಕಾರಣದಿಂದಾಗಿ ನನ್ನ ಮಟ್ಟಿಗೆ ಹೇಳುವುದಾದರೆ ಅವರು ಇಂದು ಮರೆಯಲಾಗದ ನೆನಪಾಗಿ ಉಳಿದಿದ್ದಾರೆ. ಬಹುಶಃ ಅವರನ್ನು ತೀರಾ ಹತ್ತಿರದಿಂದ ಕಂಡವರಿಗೆ, ನೋಡಿದ ಜನರಿಗೆ, ವ್ಯಕ್ತಿ ಮತ್ತು ವ್ಯಕ್ತಿತ್ವದ ಪರಿಚಯಂ ಇರತಕ್ಕ ಜನರಿಗೆ ಮಾನ್ಯ ಸಭಾನಾಯಕರು ಹೇಳಿದಂತೆ ಎಲ್ಲರ ಹೃದಯದಲ್ಲೂ ಆ ಒಂದು ಭಾವನೆ ಇದ್ದರೆ ಅದು ವಿಶೇಷವೇನೂ ಅಲ್ಲ. ಶ್ರೀಮತಿ ಗಾಂಧಿಯವರ ನಿಧನದಿಂದ ಇಡೀ ರಾಷ್ಟ್ರಕ್ಕೇ, ವಿಶ್ವಕ್ಕೇ ಒಂದು ರೀತಿಯ ವಿಶೇಷ ದುಃಖವನ್ನು ತಂದಿದ್ದರೆ ಅದು ಜನತಂತ್ರದ ಮೂಲಕ ಅವರ ೩೦ ವರ್ಷಗಳ ಅಡಳಿತ ವ್ಯವಸ್ಥೆಯೇ ಕಾರಣ. ಇಡೀ ಸಮಾಜವೇ ತಲೆತಗ್ಗಿಸಬೇಕಾದಂಥ ರೀತಿಯಲ್ಲಿ ಅವರ ಹತ್ಯೆ ನಡೆದಿದೆ.

ಶ್ರೀಮತಿ ಗಾಂಧಿಯವರ ಸರಳತೆ, ಸಭ್ಯತೆ, ರಾಷ್ಟ್ರಪ್ರೇಮವನ್ನು ಮತ್ತು ಯಾವುದೇ ಸಂದರ್ಭದಲ್ಲಾಗಲಿ, ಯಾವುದೇ ಪಕ್ಷದಲ್ಲಿರಲಿ ರಾಷ್ಟ್ರದ ಪ್ರತಿಯೊಂದು ಸ್ವರೂಪವನ್ನೂ ಅವರಂ ತಿಳಿದಿದ್ದುನ್ನು ನಾನು ಪೂರ್ಣವಾಗಿ ಕೇಳಿಕಂಡವನು ಅಷ್ಟೇ ಅಲ್ಲ ಅದನ್ನು ನೋಡಿ ಅನುಭವಿಸಿರತಕ್ಕವನೂ ಹೌದು. ಶ್ರೀಮತಿ ಗಾಂಧಿಯವರು ಅಧಿಕಾರವನ್ನು ಕಳೆದುಕೊಂಡಿದ್ದಾಗ, ಅವರಿಗೆ ಅಂಗರಕ್ಷಕರು ಇಲ್ಲದೇ ಇದ್ದಾಗ, ಇಡೀ ರಾಜ್ಯ ಮತ್ತು ರಾಷ್ಟ್ರವೇ ಅವರತ್ತ ನೋಡುತ್ತಿದ್ದಾಗ ಕನ್ನಡನಾಡಿನ ಜನ ಅದರಲ್ಲೂ ವಿಶೇಷವಾಗಿ ಚಿಕ್ಕಮಗಳೂರಿನ ಜನ ಶ್ರೀಮತಿ ಗಾಂಧಿಯವರಿಗೆ ಪುನಃ ಧೈರ್ಯ ಸ್ಥೈರ್ಯವನ್ನು ತುಂಬಿ ಮತ್ತೆ ರಾಷ್ಟ್ರದ ಅತ್ಯಂತ ಜವಾಬ್ದಾರಿಯನ್ನು ಹೊರತಕ್ಕಂಥ ಆತ್ಮ ವಿಶ್ವಾಸವನ್ನು ಹುಟ್ಟಿಸಿ ಕೃತಾರ್ಥರಾದುದು ಅಷ್ಟೇ ಅಲ್ಲ ಅವರ ಒಂದು ಕೂದಲೂ ಕೂಡ ಕೊಂಕದಂತೆ ನೋಡಿಕೊಂಡಿದ್ದು ನಮ್ಮ ಕನ್ನಡ ನಾಡಿನ ಒಂದು ಹೆಮ್ಮೆಯಂ ಸಂಗತಿ ಎಂದು ಹೇಳಬಯಸುತ್ತೇನೆ, ಆದರೆ ಜವಾಬ್ದಾರಿ ಇರತಕ್ಕವರು ಯಾರೂ ಕೂಡ ತಪ್ಪು ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ, ಎನ್ನುವ ಮಾತನ್ನು ಜಗತ್ತಿಗೇ ಹೇಳಬೇಕಾಗುತ್ತದೆ. ಶ್ರೀಮತಿ ಗಾಂಧಿಯವರು ಒಂದು ದೃಷ್ಟಿಯಿಂದ ಬಹಳ ಜನರಿಗೆ ಒಂದು ಸಮಸ್ಯೆಯಾಗಿ ಕಂಡಿರಬಹುದು. ಆಕೆಯ ಸಾವು ಈ ಸಮಸ್ಯೆಗೆ ಪರಿಹಾರವೆಂದೂ ಕೂಡ ಕಂಡುಬಂದಿರಬಹುದು. ಆದರೆ ಆಕೆಯ ಸಾವು ಒಂದು ಪರಿಹಾರವಲ್ಲ. ಈಗ ಅವರ ಸಾವಿನಿಂದ ಇಡೀ ರಾಷ್ಟ್ರದಲ್ಲೇ ಅನೇಕ ಕಷ್ಟನಷ್ಟಗಳು ಉದ್ಭವವಾಗಿವೆ. ಇದನ್ನು ರಾಷ್ಟ್ರದ ಹೊರೆಯನ್ನು ಹೊತ್ತಂಥ ಜನರು ಯೋಚನೆ ಮಾಡುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಇವತ್ತು ಈ ಸದನದಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಕ್ಕಿಂತ ನಾನು ಹೆಚ್ಚಿಗೆ ಏನನ್ನೂ ಹೇಳತಕ್ಕ ಅವಶ್ಯಕತೆಯೂ ಇಲ್ಲ, ಮತ್ತು ಅಗತ್ಯವೂ ಇಲ್ಲ. ಅವರ ಸಾವಿನಿಂದ ಆಗಿರತಕ್ಕ ತುಂಬಲಾರದ ನಷ್ಟವನ್ನು ತುಂಬುವ ಕೆಲಸವನ್ನು ರಾಷ್ಟ್ರದ ಹೊಣೆಯನ್ನು ಹೊತ್ತಿರತಕ್ಕಂಥ ಜನರು ಮಾಡುತ್ತಾರೆಂಬ ಅಭಿಪ್ರಾಯದಿಂದ ನಾನು ತಮ್ಮೆಲ್ಲರ ಅಭಿಪ್ರಾಯಕ್ಕೆ ಧ್ವನಿಗೂಡಿಸಿ ಈ ಒಂದು ನಿರ್ಣಯವನ್ನು ಸಭೆಯ ಮುಂದೆ ಮಂಡನೆ ಮಾಡಿ ಇದಕ್ಕೆ ಈ ಮಾನ್ಯ ಸಭೆಯ ಏಕಾಭಿಪ್ರಾಯ ಇದೆಯೆಂದು ಭಾವನೆ ಮಾಡಿಕೊಂಡು ಒಂದು ನಿಮಿಷಕಾಲ ಎಲ್ಲ ಸದಸ್ಯರೂ ಎದ್ದುನಿಂತು ಮೌನವನ್ನಾಚರಿಸಬೇಕೆಂದು ಪ್ರಾರ್ಥಿಸುತ್ತೇನೆ.

(ಸದನವು ಒಂದು ನಿಮಿಷಕಾಲ ಎದ್ದು ನಿಂತು ಮೌನವನ್ನಾಚರಿಸಿತು.)